ವಿಸರ್ಜನೆ ಮಾಡಿ ಹೊಸದಾಗಿ ಬರುವವರು, ಹೊಸದಾಗಿ ರಾಜ್ಯಪಾಲರ ಭಾಷಣವನ್ನು ಮಾಡಿಸಿ ಒಳ್ಳೆಯ ಆಡಳಿತವನ್ನು ಕೊಡಲು ಅವಕಾಶ ಮಾಡಿಕೊಡಿ ಎಂದು ವಿನಂತಿ ಮಾಡಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ. ಧನ್ಯವಾದಗಳು.

(5) ಗಮನ ಸೆಳೆಯುವ ಸೂಚನೆ

ವಿಷಯ: ಕುಷ್ಟಗಿ ತಾಲ್ಲೂಕಿನ ಸೇಬಿನ ಕಟ್ಟೆ ಗ್ರಾಮದ ಸರ್ವೆ ನಂ:49:1ರಲ್ಲಿರುವ ಕೆಂಪುಬಣ್ಣವುಳ್ಳ ಗಣೆಯನ್ನು ಕಾನೂನುಬಾಹಿರವಾಗಿ ಶ್ರೀರಂಗ ಇಂಡಸ್ಟ್ರೀಸ್ ಅವರಿಗೆ ಸರ್ಕಾರದಿಂದ ಮಂಜೂರು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಸೇಬಿನ ಕಟ್ಟೆ ಗ್ರಾಮದ ಸರ್ವೆ ನಂ:49:1ರಲ್ಲಿರುವ ಕೆಂಪುಬಣ್ಣವುಳ್ಳ ಗಣೆಯನ್ನು ಕಾನೂನುಬಾಹಿರವಾಗಿ ಶ್ರೀರಂಗ ಇಂಡಸ್ಟ್ರೀಸ್ ಅವರಿಗೆ ಸರ್ಕಾರ ಮಂಜೂರು ಮಾಡಿರುವ ಬಗ್ಗೆ ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳ ಗಮನ ಸೆಳೆಯುತ್ತೇನೆ.

+ ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ,

ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು, ಸೇಬಿನಕಟ್ಟೆ ಗ್ರಾಮದ ಸರ್ವೆ ನಂ.49:1ರಲ್ಲಿ ಮೆ:ಶ್ರೀ ರಂಗ ಇಂಡಸ್ಟ್ರೀಸ್, ಇವರಿಗೆ 25-1-1979 ರಿಂದ 5ವರ್ಷಗಳ ಅವಧಿಗೆ 62-00 ಎಕರೆ ಪ್ರದೇಶದಲ್ಲಿ ಪಿಂಕ್ ಗ್ರಾನೈಟ್ ಶಿಲೆಯನ್ನು ತೆಗೆಯಲು ಕಲ್ಲು ಗಣಿ ಗುತ್ತಿಗೆ ಮಂಜೂರಾಗಿತ್ತು. 1982 ರಿಂದ 1991ರವರೆಗೆ ಸರ್ಕಾರದ ಸಂಸ್ಥೆಗಳಲ್ಲದೆ ಬೇರೆ ಯಾರಿಗೂ ಕಲ್ಲು ಗಣಿ ಗುತ್ತಿಗೆಗಳನ್ನು ನೀಡಬಾರದೆಂಬ ನಿಷೇದಾಜ್ಞೆಯಿತ್ತು. ಸದರಿ ಕಲ್ಲು ಗಣಿ ಗುತ್ತಿಗೆಯನ್ನು ನವೀಕರಿಸಲು ಕೋರಿ ಈ ಸಂಸ್ಥೆಯವರು ದಿನಾಂಕ: 12-1-1991ರಂದು ಹಾಗೂ ನೂತನ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994ರನ್ವಯ ದಿನಾಂಕ: 27-6-94ರಂದು ಅರ್ಜಿ ಸಲ್ಲಿಸಿದ್ದರು. ಜೊತೆಗೆ, ಕರ್ನಾಟಕ ಉಚ್ಛನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 22580:90ಯನ್ನು ಸಲ್ಲಿಸಿ ಮಧ್ಯಂತರ ಆಜ್ಞೆ ಪಡೆದಿದ್ದಲ್ಲದೆ, ನ್ಯಾಯಾಲಯದಿಂದ ಅವರು ಸಲ್ಲಿಸಿರುವ ಅರ್ಜಿಯನ್ನು ಆದಷ್ಟು ಬೇಗನೆ ನಿಯಮಗಳನ್ವಯ ಇತ್ಯರ್ಥಗೊಳಿಸಲು ಆದೇಶವನ್ನೂ ಸಹ ಪಡೆದಿದ್ದರು.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳು 1994ರ, ನಿಯಮ 11 ರನ್ವಯ ಅರ್ಜಿಯನ್ನು ಪರಿಶೀಲಿಸಿ ಮೆ: ಶ್ರೀರಂಗ ಇಂಡಸ್ಟ್ರೀಸ್ ಇವರು ಸಣ್ಣ ಪ್ರಮಾಣದ ಕೈಗಾರಿಕಾ ಘಟಕ ಅಥವಾ ಶೇಕಡ 100 ಈ.ಓ.ಯು. ಹೊಂದಿರುವ ಬಗ್ಗೆ ದಾಖಲೆಗಳನ್ನು ಸಲ್ಲಿಸದಿದ್ದ ಕಾರಣ ಕರ್ನಾಟಕ

ಉಪ ಖನಿಜ ರಿಯಾಯಿತಿ ನಿಯಮ 1994ರ ನಿಯಮ 12-(iii)ರಂತೆ ಸರ್ಕಾರವು ಅಧಿಸೂಚನೆ ಸಂಖ್ಯೆ:ಸಿಐ 152 ಎಂಎಂಎಸ್ 95 ದಿನಾಂಕ: 21-8-95ರಲ್ಲಿ ಕೊಪ್ಪಳ ಜಿಲ್ಲೆಯ, ಕುಷ್ಟಗಿ ತಾಲ್ಲೂಕು, ಸೇಬಿನಕಟ್ಟೆ ಗ್ರಾಮದ ಸರ್ವೆ ಸಂಖ್ಯೆ:49:1ರ 10.00 ಎಕರೆ ಪ್ರದೇಶದಲ್ಲಿ ಮಾತ್ರ ಮೆ: ಶ್ರೀರಂಗ ಇಂಡಸ್ಟ್ರೀಸ್‌ಗೆ ಕಲ್ಲು ಗಣಿ ಗುತ್ತಿಗೆ ನೀಡಿತ್ತು. ಇದರಿಂದ ಬಾಧಿತರಾಗಿ ಸಂಸ್ಥೆಯವರು ಕರ್ನಾಟಕ ಉಚ್ಛನ್ಯಾಯಾಲಯದಲ್ಲಿ ತಮಗೆ 62-00 ಎಕರೆ ಪ್ರದೇಶದಲ್ಲಿ ಕಲ್ಲುಗಣಿ ಗುತ್ತಿಗೆಯನ್ನು ನವೀಕರಿಸಲು ಆದೇಶ ಕೋರಿ ರಿಟ್ ಅರ್ಜಿ ಸಂಖ್ಯೆ: 37129:95 ಸಲ್ಲಿಸಿ ಬೇರೆ ಯಾರಿಗೂ ಸದರಿ ಪ್ರದೇಶವನ್ನು ಮಂಜೂರು ಮಾಡದಂತೆ ಅಥವಾ ಹರಾಜು ಮಾಡದಂತೆ ತಡೆಯಾಜ್ಞೆ ಪಡೆದಿದ್ದರು.

ಈ ನಡುವೆ ದಿನಾಂಕ: 6-11-1995ರಂದು ಅರಣ್ಯ ಇಲಾಖೆಯು ಈ ಸರ್ವೆ ನಂಬರಿನಲ್ಲಿರುವ ಎಲ್ಲಾ ಪ್ರದೇಶನ್ನು ಅರಣ್ಯ ಇಲಾಖೆಗೆ ಸೇರಿಸುವ ಬಗ್ಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು. ಇದರನ್ವಯ ರಾಯಚೂರು ಜಿಲ್ಲಾಧಿಕಾರಿಗಳು ಈ ಪ್ರದೇಶವು ಮೀಸಲು ಅರಣ್ಯ ಪ್ರದೇಶವಾಗಿರುವುದರಿಂದ ಈ ಪ್ರದೇಶದಲ್ಲಿ ಕಲ್ಲು ಗಣಿ ಗುತ್ತಗೆ ನೀಡಬಾರದೆಂದು ವರದಿ ಮಾಡಿದ್ದರು ಹಾಗೂ ಅದರಂತೆ ಈ ಪ್ರದೇಶದ ಮೇಲಿದ್ದ ಎಲ್ಲಾ 28ಕಲ್ಲು ಗಣಿ ಗುತ್ತಿಗೆ ಅರ್ಜಿಗಳನ್ನು ತಿರಸ್ಕರಿಸಲು ಶಿಫಾರಸ್ಸು ಮಾಡಿ ನಿಯಮ 11ರ ಸಮಿತಿಯ ಮುಂದಿಡಲಾಗಿತ್ತು. ಆದರೆ ಕರ್ನಾಟಕ ಅರಣ್ಯ ಕಾಯಿದೆಯಡಿ ನೇಮಿಸಲ್ಪಟ್ಟ ಬಳ್ಳಾರಿ ವಲಯದ ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರ್‌ರವರು ಸದರಿ ಪ್ರದೇಶವನ್ನು ಮೀಸಲು ಅರಣ್ಯ ಪ್ರದೇಶವೆಂದು ಘೋಷಿಸಿ ದಿನಾಂಕ 6-11-1995ರ ಅಧಿಸೂಚನೆಯನ್ನು ಕೈ ಬಿಡಲು ದಿನಾಂಕ: 5-12-1997ರ ಅವರ ಆದೇಶ ಸಂಖ್ಯೆ: ಆರ್‌ಎಫ್‌ಡಿ: ಎಫ್‌ಎನ್‌ಡಿ: ಸಿಆರ್: 1:96-97ರಲ್ಲಿ ಸೂಚಿಸಿದರು.

ಈ ಸಂದರ್ಭದಲ್ಲಿ ಮೆ:ಶ್ರೀ ರಂಗ ಇಂಡಸ್ಟ್ರೀಸ್ ಇವರು ತಾವು 1991 ರಿಂದಲೇ ಸಣ್ಣ ಪ್ರಮಾಣದ ಕೈಗಾರಿಕಾ ಘಟಕವನ್ನು ಹೊಂದಿದ್ದ ಬಗ್ಗೆ ದಾಖಲೆಗಳನ್ನು ಒದಗಿಸಿ ನಿಯಮಗಳನ್ವಯ ಮಂಜೂರಾತಿ ಕೋರಿದ್ದು, ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994ರ 12(iii) ಮತ್ತು 15(ii)ರನ್ವಯ ಹಿಂದಿನ ಅಧಿಸೂಚನೆ ಮಾರ್ಪಡಿಸಿ 10-00 ಎಕರೆ ಬದಲಾಗಿ 40-00 ಎಕರೆಯನ್ನು 5ವರ್ಷಕ್ಕೆ ಬದಲಾಗಿ 40 ವರ್ಷಗಳಿಗೆ ಮಂಜೂರು ಮಾಡಲು ಕೋರಿಕೆ ಸಲ್ಲಿಸಿದ್ದು, ಸದರಿ ಅರ್ಜಿಯು ಸರ್ಕಾರದ ಪರಿಶೀಲನೆಯಲ್ಲಿದೆ.

+ ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ತರುವುದಾದರೆ ಬಹುಶಃ ಸರ್ಕಾರ ಏಕೆ ಈ ಸತ್ಯಾಂಶವನ್ನು ಮುಚ್ಚಿಡುತ್ತಿದೆಯೊ ಗೊತ್ತಿಲ್ಲ. ಈಗಾಗಲೇ ಶ್ರೀರಂಗ ಇಂಡಸ್ಟ್ರೀಸ್‌ರವರಿಗೆ ಸರ್ಕಾರ ಕೊಟ್ಟಿದೆ. ನೀವು ಬಹುಶಃ ವಿತ್‌ಡ್ರಾ ಮಾಡಿಕೊಂಡಿರೂ ಏನೋ ಗೊತ್ತಿಲ್ಲ. ಆದರೆ ಇವರಿಗೆ ಸುಮಾರು ಇಲ್ಲೀಗಲ್

ಗ್ರಾನೈಟ್ ಕ್ವಾರಿಯನ್ನು 62 ಎಕರೆಯಲ್ಲಿ ಇದು 5 ವರ್ಷಕ್ಕೋಸ್ಕರ ಎಂದು ಹೇಳಿ ತಾವೇನು 1979ರಲ್ಲಿ ಹೇಳಿದ್ದಿರಿ ಅದು ಹಳೆಯ ಕತೆ. ಆದರೆ ಇತ್ತೀಚೆಗೆ ಅವರ ಒಂದೇ ಅಪ್ಲಿಕೇಷನ್ ತೆಗೆದುಕೊಂಡು, ಏಕೆಂದರೆ ಇದರ ಪ್ರಕಾರ ಮೊದಲು ಏನು ಕರೆದಿರಿ, ಯಾರು ಅರ್ಜಿದಾರರು ಇದ್ದರೂ ಸುಮಾರು ಹತ್ತಾರು ಅರ್ಜಿದಾರರನ್ನು ಕರೆದು ಅವರ ಯಾವುದೇ ಕೇಸನ್ನು ತೀರ್ಮಾನ ತೆಗೆದುಕೊಳ್ಳದೆ, ಅದನ್ನು ಅಲ್ಲಿಗೆ ಕ್ಲೋಸ್ ಮಾಡಿ ಕೇವಲ ಇವರೊಬ್ಬರಿಗೆ ಎಕ್ಸ್‌ಪೋರ್ಟ್ ಹೆಸರಿನಲ್ಲಿ ಇರಬಹುದು, ಇಂಪೋರ್ಟ್ ಹೆಸರಿನಲ್ಲಿ ಇರಬಹುದು ಅಥವಾ ಮತ್ತೇನು ಡೀಲಿಂಗ್ ಇದೆಯೋ ಗೊತ್ತಿಲ್ಲ. ಆದರೆ, ಇವರಿಗೆ ನೇರವಾಗಿ ಬಳ್ಳಾರಿ ಎ.ಸಿ.ಯವರು ಇದು ಫಾರೆಸ್ಟ್ ಜಮೀನು ಇದೆ ಎಂದು ತಿಳಿದುಕೊಂಡು ಕೊಡುವುದಕ್ಕೆ ಬರುತ್ತದೆ ಎನ್ನತಕ್ಕಂಥ ಆಧಾರದಮೇಲೆ ರೆಕಮೆಂಡ್ ಮಾಡಿದ್ದೇವೆ ಎಂದು ಹೇಳಿ ಅದೇ ಒಂದು ನೆಪ ಹುಡುಕಿ ಪುನಃ ರೆಕಮೆಂಡ್ ಮಾಡಿಕೊಂಡು ಇಲ್ಲಿಯತನಕ ಬಂದು ಕೊನೆಗೆ ಆ ಇಂಡಸ್ಟ್ರಿಯವರಿಗೆ ಸರ್ಕಾರದವರು ಕೊಟ್ಟಿದ್ದೀರಿ ಎನ್ನತಕ್ಕಂಥದ್ದು ಈಗಾಗಲೇ ಗೊತ್ತಾಗಿದೆ. ಇದರ ಡೀಟೈಲ್ಸ್ ಕೂಡ ಸದಸ್ಯರಾದ ಜಯಚಂದ್ರರವರ ಹತ್ತಿರ ಕೂಡ ಇದೆ. ಆಮೇಲೆ ಇದನ್ನು ಒಂದೇ ಇಂಡಸ್ಟ್ರೀಗೆ ಮಾಡತಕ್ಕಂಥ ಅವಶ್ಯಕತೆ ಏನಿತ್ತು? ಮತ್ತೆ ಯಾವಾಗ ಅದು ಸರ್ಕಾರದ್ದು ಇದೆ, ಅದನ್ನು ಕೊಡುವುದಕ್ಕೆ ಬರುವುದಿಲ್ಲ ಎಂದು ಡಿ.ಸಿ.ಯವರು ನಿಮಗೆ ಬರೆದಮೇಲೂ ಕೂಡ ಪುನಃ ತಿರುಗಾಮುರುಗಿ ಇದನ್ನು ಪರಿಶೀಲನೆ ಮಾಡಿ ನೋಡಿ ಎನ್ನತಕ್ಕಂಥದ್ದು, ಆಮೇಲೆ ಬಳ್ಳಾರಿ ಸೆಟಲ್‌ಮೆಂಟ್ ಆಫೀಸರ್ ಮೇಲೆ ಒತ್ತಡ ತರತಕ್ಕಂಥದ್ದು, ಇಲ್ಲಿ ಸರ್ಕಾರದಲ್ಲಿ ಅದನ್ನು ತೆಗೆದುಕೊಂಡು ಬಂದು ನೀವೇ ಅದನ್ನು ನೇರವಾಗಿ ಪರಿಶೀಲನೆ ಮಾಡಿ ಕೊಡತಕ್ಕಂಥದ್ದು ಏನು ಇತ್ತು? ಇದರಲ್ಲಿ ಯಾರ್‍ಯಾರ ಕೈವಾಡ ಇದೆ ಯಾರ ಶಿಫಾರಸ್ಸು ಇದೆ ಇದನ್ನು ಹೇಳಬೇಕಾಗುತ್ತದೆ. ಏಕೆಂದರೆ ಬರೀ ಸುಮ್ಮನೆ ಪರಿಶೀಲನೆಯಲ್ಲಿದೆ, ಇದು ಹಿಂದೆ ಕೋರ್ಟಿನಲ್ಲಿತ್ತು. ಕೋರ್ಟಿನಲ್ಲಿ ಎಲ್ಲ ಪರಿಶೀಲನೆ ಮಾಡಿ ಎಂದು ಕಳುಹಿಸುತ್ತಾರೆ. ಪರಿಶೀಲನೆ ಮಾಡುವವರು ಕಾನೂನು ಪ್ರಕಾರ ಪರಿಶೀಲನೆ ಮಾಡಬೇಕು. ರೂಲ್ಸ್ ಪ್ರಕಾರ ಪರಿಶೀಲನೆ ಮಾಡಬೇಕು ಮತ್ತು ನೀವು ಯಾರಿಗಾದರೂ ಕೊಡಬೇಕಾದರೂ ಕೂಡ ಮುಕ್ತ ಅವಕಾಶ ಎಲ್ಲರಿಗೂ ಕೊಡಬೇಕು, ಅವರ ಅರ್ಜಿಯನ್ನು ಪರಿಶೀಲನೆ ಮಾಡಿ ನಿಮ್ಮ ಕ್ವಾಲಿಫಿಕೇಷನ್‌ನಲ್ಲಿ ಅಥವಾ ನೀವು ಹಾಕಿದಂಥ ಕಂಡೀಷನ್‌ನ್ನು ಫುಲ್‌ಫಿಲ್ ಮಾಡದೆ ಹೋದರೆ ನೀವು ರಿಜಕ್ಟ್ ಮಾಡುವುದಕ್ಕೆ ಸಾಧ್ಯ ಇದೆ. ಆದರೆ ನಿಮಗೆ ಬೇಕಾದಂತಹವರಿಗೆ ನೇರವಾಗಿ ಒಂದೇ ಅಪ್ಲಿಕೇಷನ್ ತೆಗೆದುಕೊಂಡು ಯಾವುದೋ ಒಂದುರೀತಿಯಿಂದ ಎಕ್ಸ್‌ಪೋರ್ಟ್ ಹೆಸರಿನಲ್ಲೋ, ಸ್ಮಾಲ್ ಸ್ಕೇಲ್ ಇಂಡಸ್ಟ್ರಿ ಹೆಸರಿನಲ್ಲೋ ಅಥವಾ ಯಾವುದಾದರೂ ಹಿಂದುಳಿದ ಭಾಗ ಎಂದು ಹೇಳಿ ಅವರ ಹೆಸರಿನಲ್ಲೋ, ಸುಮಾರು 3,500 ಕೋಟಿ ರೂಪಾಯಿ ಬಾಳತಕ್ಕಂಥ ಖನಿಜ ಸಂಪತ್ತು ಅದು ಇದೆ.

MR. SPEAKER: How do you say that?

SRI M.MALLIKARJUNA KHARGE: That is the estimate made by the Settlement officer himself, the Forest officer.

MR. SPEAKER: Do you have any document?..

SRI M.MALLIKARJUNA KHARGE: That report is also here.

MR. SPEAKER: Could you kindly pass it on to me?

SRI M.MALLIKARJUNA KHARGE: It is also with them

MR. SPEAKER: I don't have.

SRI M.MALLIKARJUNA KHARGE: I will read and I will also give it to you.

ಶ್ರೀ ಬಿ.ಎಸ್.ಯಡಿಯೂರಪ್ಪ: ಅರಣ್ಯ ಇಲಾಖೆಯ ಕಾರ್ಯದರ್ಶಿಯವರು ರೆವಿನ್ಯೂ ಇಲಾಖೆಗೆ ಈ ತರಹ, 3,500 ಕೋಟಿ ರೂಪಾಯಿಯ ಪಚ್ಚೆ ಹರಳು ನಿಕ್ಷೇಪ ಇದೆ ಎಂದು ಪತ್ರ ಬರೆದಿದ್ದಾರೆ. ಇವರಿಗೆ ಈಗಾಗಲೇ ಜಮೀನು ಕೊಟ್ಟಾಗಿದೆ. ಮತ್ತೆ ಆ ಪಾಲುದಾರರಲ್ಲಿ ಆಡಳಿತದಲ್ಲಿರುವಂತಹವರ ಅನೇಕ ಪ್ರಮುಖರಿದ್ದಾರೆ ಎಂದು ಮನೆಮಾತಾಗಿದೆ. ಅದಕ್ಕೆ ನಾನು ಹೇಳುವುದು ಆ ವಿವರವನ್ನು ಕೊಟ್ಟುಬಿಡಿ, ಆ 28ಜನ ಅರ್ಜಿದಾರರ ವಿಳಾಸ ಕೊಡಿ, ಆ ಪಾಲುದಾರರ ವಿಳಾಸ ಕೊಡಿ.

SRI M.MALLIKARJUNA KHARGE: I am on my legs.

SRI P.G.R.SINDHIA (Minister for Transport): I want to help you. Whatever information they want, whatever names they want, whatever report they want, I am prepared to place before this House. There is no hide and seek here. I am making it very clear to the Hon'ble Leader of the Opposition.

SRI M.MALLIKARJUNA KHARGE: There is hide

and seek here.

SRI P.G.R.SINDHIA: I would not do it. I hereby solemnly assure this August House Hon'ble Sir, that whatever materials are there, I am prepared to place them before this August House.

MR. SPEAKER: You are very fair.

SRI M.MALLIKARJUNA KHARGE: I know your courage and I appreciate. I quote:

"Office of the Forest Settlement Officer, Bellary No.RFT/FSO/CG-1/96-97 dated 5-12-1997:" Please see page 3, Para 1:

"The proposed land is mostly covered with a valuable Pink Granite Deposit. The Pink Granite as on today is mostly sought after Granite in the world and it exists only in this belt of the country. The approximate deposit is 8 lakhs Cubic Meters of which the present value would be a Foreign Exchange of not less than Rs. 3,500 crores and loss of Revenue is Rs.170 crores." I am not saying this. Their own Officer, the Forest Settlement Officer, Bellary, has written a letter dated 5-12-1997.

MR. SPEAKER: The inference is the Pink Granite there is estimated worth according to Foreign Exchange is Rs.3,500/-crores.

SRI M.MALLIKARJUNA KHARGE: It may be an exaggeration, it may be less or it may be a reality. But where was the necessity to call one appliation, settle before the Election in a hurry? who is responsible for it?

3.40 ಪಿ.ಎಂ

ಇವತ್ತು ನಾವು ಗಮನ ಸೆಳೆಯುವ ಸೂಚನೆಯ ಮುಖಾಂತರ ಈ ವಿಷಯವನ್ನು ಪ್ರಸ್ತಾಪ ಮಾಡಿದ ಮೇಲೆ ಎಲ್ಲಾ ಮಾತನಾಡಿಕೊಂಡು ತಯಾರು ಮಾಡಿರುವಂತಹ ವರದಿಯಾಗಿದೆ. ಇದರಲ್ಲಿ ಪೂರ್ಣ ಮಾಹಿತಿ ಇಲ್ಲ. ಆದುದರಿಂದ, ದಯಮಾಡಿ ಇದರ ಬಗ್ಗೆ ತಮಗೆ ಹೆಚ್ಚು ವಿಷಯಗಳು ಗೊತ್ತಿರುತ್ತದೆ. ತಾವು ಸಾರಿಗೆ ಸಚಿವರಾಗಿದ್ದರೂ ಗೊತ್ತಿರುತ್ತದೆ, ಹಿಂದೆ ಗೃಹ ಸಚಿವರಾಗಿದ್ದಾಗಲೂ ಗೊತ್ತಿರುತ್ತದೆ.

SRI P.G.R.SINDHIA: Why are you accusing me?

SRI M.MALLIKARJUNA KHARGE: I am not accusing you: If you have got information, please enlighten us. ಎಂದು ನಾನು ಹೇಳುವಂಥಾದ್ದು. ಈಗ ನಿಮ್ಮ ಬಳಿ ಈ ಇಲಾಖೆ ಇರುವುದರಿಂದ you have got all the information and records.

SRI P.G.R.SINDHIA: In the absence of the Hon.Chief Minister, I only replying and speaking on behalf of the Chief Minister. On the Floor of the House.

ಅಧ್ಯಕ್ಷರು: ಮಾನ್ಯ ಸಿಂಧ್ಯರವರೇ, ಅವರು ಹೇಳುವಂಥಾದ್ದು the implied meaning is, you are looking after legislative business and you have access to all the files. That is what you mean.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದೂ ಆಯಿತು.

ಅಧ್ಯಕ್ಷರು: ಅಂದರೆ You know everything

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಅಲೋಕೇಷನ್ ಆದಾಗ ಈ ಇಲಾಖೆಯನ್ನು ಸೆಷನ್‌ನಲ್ಲಿ ಇದನ್ನು ಅವರಿಗೆ ಒಪ್ಪಿಸಿದ್ದಾರೆ. ಮಾನ್ಯ ಮಂತ್ರಿಗಳು ಫೈಲ್ ತರದೇ ಉತ್ತರವನ್ನು ಕೊಡುತ್ತಾರಾ? ಈ ಎಲ್ಲಾ ರೆಕಾರ್ಡ್‌ಗಳು ಅವರ ಹತ್ತಿರ ಇದೆ. ಇದು ಇಲ್ಲದಿದ್ದರೂ ಕೂಡ he has got influence over the Chief Minister: he can get anything from the office.

SRI P.G.R.SINDIA: I have made it clear, to the Hon.Leader of the Opposition, and also to the House. If you want any information regarding this, we will give. The Government has not sanctioned. It is only at the level of examinatioin. Whatever you want, we are

prepared to produce before this August House.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:ಮಾನ್ಯ ಅಧ್ಯಕ್ಷರೆ, ಸೆಟಲ್‌ಮೆಂಟ್ ಆಫೀಸರ್ ರಿಪೋರ್ಟ್ ಮೇಲೆ ನೀವು ಏನು ಮಾಡಿದ್ದೀರಿ? ಒಂದೇ ಅಪ್ಲಿಕೇಷನ್ ಅನ್ನು ತೆಗೆದುಕೊಳ್ಳುವಂಥಾದ್ದು ಏಕೆ ಬಂತು, ಮತ್ತೆ ಈ ಸೆಟಲ್‌ಮೆಂಟ್ ಆಫೀಸರ್‌ಗೆ ಈ ಅಧಿಕಾರವನ್ನು ಕೊಡಬಹುದು ಎನ್ನುವಂಥಾದ್ದು, ರೆಕಮೆಂಡ್ ಮಾಡಬಹುದು ಎನ್ನುವಂಥಾದ್ದು ರೂಲ್ಸ್‌ನಲ್ಲಿ ಮಾಡಿರುವಂಥಾದ್ದು ಮತ್ತೆ ತರಾತುರಿಯಲ್ಲಿ ಈ ನಿರ್ಣಯವನ್ನು ಏಕೆ ತೆಗೆದುಕೊಂಡಿದ್ದೀರಿ ಎನ್ನುವಂಥಾದ್ದನ್ನು ಸ್ಪಷ್ಟವಾಗಿ ಹೇಳಬೇಕು. ಇದರಲ್ಲಿ ಕೋಟಿಗಟ್ಟಲೆ ಹಣ ಇನ್‌ವಾಲ್ವ್ ಆಗಿದೆ. ಆದುದರಿಂದ ದಯಮಾಡಿ ಇದನ್ನು ಯಾವುದೇ ರೀತಿಯಲ್ಲಿ ಉತ್ತರವನ್ನು ಕೊಡುವಂಥ ದೃಷ್ಟಿಯಲ್ಲ. ಇವತ್ತು ಕೋಟ್ಯಾಂತರ ರೂಪಾಯಿಗಳ ಡಿಪಾಸಿಟ್ ಯಾವುದೋ ವ್ಯಕ್ತಿಗೆ ಇಂಡಸ್ಟ್ರೀ ಕೈವಶವಾಗಬೇಕಾದರೆ ಇದು ಹೇಗೆ? ಇದೇ ರೀತಿಯಾಗಿ ಅನೇಕ ಸಾರಿ ಇಲ್ಲೀಗಲ್ ಆರ್ಡರ್ ಪಾಸ್ ಮಾಡಿ ಲೂಟಿಯಾಗಿದೆ. ಈ ಹಿಂದೆ ಕೂಡ ಬಿಜಾಪುರದಲ್ಲಿ ಡೆಪ್ಯುಟಿ ಕಮೀಷನರ್ ''ಜಮ್ ಗ್ರಾನೈಟ್'' ಬಗ್ಗೆ ಕೂಡ ಈ ವಾದ ಬಂದಾಗ ನೀವೇ ಸುಪ್ರೀಂ ಕೋರ್ಟ್‌ಗೆ ಹೋಗಿ ವಾದ ಮಾಡಿಕೊಂಡು ಪುನಃ ನೀವೇ ಹಿಂದಿನಿಂದ ಯಾವುದೋ ರೀತಿಯಲ್ಲಿ ಕೊಟ್ಟಿರಿ, ಅದಕ್ಕೂ ಡಿಫೆಂಡ್ ಮಾಡಿಕೊಂಡಿರಿ. ಇದು ಏನಾಗುತ್ತದೆಂದರೆ ನಿಮಗೆ ನಾವು ಇದನ್ನೆಲ್ಲಾ ಹುಡುಕಿ ತಂದು ಕೊಟ್ಟರೂ ಕೂಡ ಅದರಲ್ಲಿ ತಪ್ಪು ಮಾಡಿರುವುದನ್ನು ಹೇಗೆ ರೆಗ್ಯುಲರೈಸ್ ಮಾಡಿಕೊಡಬೇಕೆಂಬ ಕಡೆಗೆ ನಿಮ್ಮ ಗಮನ ಹರಿಯುತ್ತದೆಯೇ ಹೊರತು ಇದರಲ್ಲಿ ತಪ್ಪು ಇರುವಂಥಾದ್ದನ್ನು ಸರಿ ಮಾಡಿಕೊಂಡು ರಾಜ್ಯಕ್ಕೆ ಆದಾಯವನ್ನು ಹೆಚ್ಚಿಗೆ ತರುವಂಥಾದ್ದು ಮತ್ತು ಹಣವನ್ನು ಉಳಿಸಿಕೊಳ್ಳುವಂಥಾದ್ದರ ಕಡೆಗೆ ನಿಮ್ಮ ಗಮನ ಹರಿಯುತ್ತಲೇ ಇಲ್ಲ. ಆದುದರಿಂದ, ದಯಮಾಡಿ ನೀವು ಇದಕ್ಕೆ ಸ್ಪಷ್ಟೀಕರಣವನ್ನು ಕೊಡಬೇಕು, ಆನಂತರ ನಾನು ಮತ್ತೆ ಉಳಿದ ಕ್ಲಾರಿಫಿಕೇಷನ್ ಕೇಳುತ್ತೇನೆ.

ಅಧ್ಯಕ್ಷರು: ಎಲ್ಲಾ ಒಟ್ಟಿಗೆ ಕೊಡುತ್ತೀರೋ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸ್ವಲ್ಪ ಸ್ವಲ್ಪ ವಿಷಯಗಳು ಪ್ರಸ್ತಾಪವಾದರೆ ಮತ್ತೆ ಅವರು ಕೊನೆಗೆ ಒಂದೇ ತಕರಾರು ಮಾಡಿಕೊಂಡು ಹೋಗಿಬಿಡುತ್ತಾರೆ. ಈ ಅರ್ಜಿ ಮೂರೂವರೆ ಸಾವಿರ ಕೋಟಿ ರೂಪಾಯಿಗಳ ತಕರಾರು ಅರ್ಜಿಯಾಗಿದೆ.

+ ಶ್ರೀ ಡಿ.ಕೆ.ಶಿವಕುಮಾರ್ (ಸಾತನೂರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯರವರು ಬಹಳ ಕಷ್ಟಪಟ್ಟು ಉತ್ತರವನ್ನು ತಯಾರು ಮಾಡಿ ಸೈನ್ ಹಾಕಿಸಿ ಕೊಟ್ಟಿದ್ದಾರೆ. ಈ ಉತ್ತರದಲ್ಲಿ ಎಲ್ಲಾ ವಿಚಾರಗಳನ್ನು ತಂದಿದ್ದಾರೆ. ಇದು ಸಾಮಾನ್ಯ ಜನರ ಕೈಯಲ್ಲಿ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಶ್ರೀರಂಗಪಟ್ಟಣದಲ್ಲಿರುವಂತಹ ಶ್ರೀರಂಗ ಇಲ್ಲಿ ಬಂದಿಲ್ಲ, ತಲಕಾವೇರಿಯಲ್ಲಿರುವಂತಹ ಮಧ್ಯರಂಗ ಬಂದಿಲ್ಲ, ಮತ್ತೆ ಆ ಶ್ರೀ ರಂಗನೂ

ಬಂದಿಲ್ಲ. ಈ ಮೂರು ಜನ ಶ್ರೀರಂಗರೂ ಸೇರಿ ಈ ಒಂದು ಶಕ್ತಿಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮೂರೂವರೆ ಸಾವಿರ ಕೋಟಿ ರೂಪಾಯಿಗಳೆಂದು ಹೇಳಿದ್ದಾರೆ. ಈ ಒಂದು ಸ್ಕ್ಯಾಂಡಲ್ ಏನು ಇದೆ, ಈ ಭಾರತದ ಗಣಿ ಇಲಾಖೆಯಲ್ಲಿ ಯಾವ ಒಬ್ಬನು ಇಂತಹ ಒಂದು ದೊಡ್ಡ ಸ್ಕ್ಯಾಂಡಲ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ನನ್ನ ವೃತ್ತಿಗೋಸ್ಕರ ಗಣಿ ಕೆಲಸವನ್ನು ಮಾಡುತ್ತಿದ್ದೇನೆ,. ಆದರೆ ಇಂತಹ ಸ್ಕ್ಯಾಂಡಲ್ ಅನ್ನು ನಾನು ನೋಡಿಲ್ಲ. ಇದರ ಹಿಂದೆ ಅಗಾಧವಾದ ಕೈಗಳಿದ್ದು, ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್ ಆಫೀಸರ್ಸ್ ಎರಡು ಕೋಟಿ ರೂಪಾಯಿಗಳ ಹಣವನ್ನು ಚುನಾವಣೆಗೋಸ್ಕರ ಕಲೆಕ್ಷನ್ ಮಾಡುತ್ತಾರೆ, ಪ್ರತಿಯೊಬ್ಬ ಆಫೀಸರ್ಸ್‌ನಿಂದಲೂ ಕಲೆಕ್ಟ್ ಮಾಡುತ್ತಾರೆ, ಅಡಿಷನಲ್ ಡೈರೆಕ್ಟರ್, ಡೈಕ್ಟರ್ ಆಗಬೇಕೆಂದು ಬಹಳ ಪ್ರಯತ್ನ ಮಾಡುತ್ತಾರೆ. ಎಲ್ಲಾ ದೊಡ್ಡ ದೊಡ್ಡ ಗಣ್ಯರನ್ನು ಸೇರಿಸಿಕೊಂಡು ಇಂತಹ ಒಂದು ದೊಡ್ಡ ಪವಿತ್ರವಾದಂತಹ ಕೆಲಸವನ್ನು ಮಾಡಿದ್ದಾರೆ. ಇಲ್ಲಿ ಕಾನೂನು ಬಗ್ಗೆ ಮಾತನಾಡುತ್ತಿದ್ದರು, ಕೋರ್ಟ್ ಆದೇಶಕೊಟ್ಟಿದೆ ಎಂದು ಹೇಳುತ್ತಿದ್ದರು. ಕೋರ್ಟ್ ಏನೆಂದು ಆದೇಶವನ್ನು ಕೊಟ್ಟಿದೆ? ಕಾನೂನು ಪ್ರಕಾರ ಮಾಡಿ ಎಂದು ಹೇಳಿದೆ. ನಿಮ್ಮ ರೂಲ್ಸ್ ಏನು ಹೇಳುತ್ತದೆ, ಕಲ್ಲು ಗಣಿಯನ್ನು ಯಾರಿಗಾದರೂ ಗುತ್ತಿಗೆಗೆ ಕೊಡಬೇಕೆಂದರೆ ನೀವು ನೋಟಿಫೈ ಮಾಡಬೇಕು. ನೀವು ಎಲ್ಲಿ ನೋಟಿಫೈ ಮಾಡಿದ್ದೀರಿ? come on, Let me see Notifications. ನೀವು ಸೆಕ್ಷನ್ 8ಎ ಪ್ರಕಾರ ಎಲ್ಲಿ ನೋಟಿಫೈ ಮಾಡಿದ್ದೀರಿ. ನಿಮ್ಮ ಡೆಪ್ಯೂಟಿ ಕಮೀಷನರ್ ಎನ್‌ಓಸಿ ಎಲ್ಲಿ ಕೊಟ್ಟಿದ್ದಾರೆ ಹೇಳಿ, ಸಾಕು, ದಿನಾಂಕ: 30-12-1997ರಂದು ಎಸ್.ಎಸ್.ಐ ರಿಜಿಸ್ಟ್ರೇಷನ್ ಮಾಡಿಸಿ 1ನೇ ತಾರೀಖಿನಂದು ಸ್ಪೆಷಲ್ ಕಮಿಟಿಯನ್ನು ಇಡುತ್ತೀರಿ. ಇವತ್ತು ಆರ್ಡರ್ ಮಾಡಿಲ್ಲ, ಲೀಜ್‌ಗೆ ಕೊಟ್ಟಿಲ್ಲವೆಂದು ಹೇಳುತ್ತೀರಿ, ಇವತ್ತು ಬೆಳಗಿನಿಂದ ನಿಮ್ಮ ಲೀಜ್‌ಗೆ ಕೊಟ್ಟಿರುವುದರನ್ನೂ ವಜಾ ಮಾಡಿದ್ದೀರಿ. ನೋಟಿಫಿಕೇಷನ್ ಅನ್ನು ವಿತ್ ಡ್ರಾ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದಿರಿ, ಫೈಲ್ ಅನ್ನು ಹಾಗೆ ಬರೆದುಬಿಟ್ಟಿದ್ದೀರಿ, ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಸೈನ್ ಹಾಕಿಲ್ಲವೇ? ಅದನ್ನು ತರಿಸಿ I demand C.B.I probe in this. ಇದರಲ್ಲಿ ಕಾಣದ ಕೈಗಳು ಇದೆ, ಇದರಲ್ಲಿ ಒಬ್ಬ ಎಂ.ಎಲ್.ಸಿ, ಒಬ್ಬ ಮಾಜಿ ಎಂ.ಪಿ, ಬೇಕಾದಷ್ಟು ಅಧಿಕಾರಿಗಳು, ರಾಜಕಾರಣಿಗಳು ಇದ್ದಾರೆ. ಇದನ್ನು ನಾನು ಪ್ರೂವ್‌ಮಾಡಲಿಲ್ಲವೆಂದರೆ ನಾನು ಈ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುವುದಕ್ಕೆ ತಯಾರಿದ್ದೇನೆ. ನಾನು ಯಾವ ಸವಾಲಿಗೂ ಸಿದ್ಧನಿದ್ದೇನೆ. ಇದರಲ್ಲಿ ಏನೇನು ನಡೆಯುತ್ತಿದೆ ಎನ್ನುವುದು ನನಗೆ ಗೊತ್ತಿದೆ. ಮಾನ್ಯ ಅಧ್ಯಕ್ಷರೆ, ಇವರಲ್ಲಿ ಯಾರ ಮೇಲೂ ನನಗೆ ನಂಬಿಕೆ ಇಲ್ಲ, ದಯಮಾಡಿ ಸಿ.ಬಿ.ಐಗೆ ಅವಕಾಶ ಮಾಡಿಕೊಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಸಿ.ಬಿ.ಐ.ತನಿಖೆ ಮಾಡಿಸಿ,

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಅವರೇ ಇದನ್ನು ಹೇಳಿರುವಂಥಾದ್ದು

"The Director of Mines & Geology has written a letter bringing some of the technical points.." ಅವರು ಮೂರೂವರೆ ಸಾವಿರ ಕೋಟಿ ರೂಪಾಯಿಗಳೆಂದು ಹೇಳಿದ್ದಾರೆ. ಸರ್ಕಾರದವರು ಒಂದು ಸಣ್ಣ ಏರಿಯಾವನ್ನು ಆಕ್ಷನ್ ಮಾಡುತ್ತಿದ್ದಾರೆ. Why can't you auction this? ಯಾರೋ ಒಬ್ಬರು ಕೋರ್ಟಿಗೆ ಹೋದರು, ಅವರು ಕೋರ್ಟಿಗೆ ಹೋಗಿದ್ದರೆ ಅದನ್ನು ವಿಥ್ ಡ್ರಾ ಮಾಡಿಸಬೇಕಾಗಿತ್ತು, ಏನೆಂದು ಅವನು ಕೋರ್ಟಿಗೆ ಹೋಗಿದ್ದಾನೆ. ಕಾನೂನಿನ ಪ್ರಕಾರ ಈ ಅಪ್ಲಿಕೇಷನ್ ಅನ್ನು ಡಿಸ್‌ಪೋಸ್ ಮಾಡಿ ಎಂದು ಹೇಳಿದ್ದಾರೆ. ನಿಮ್ಮ ಕಾನೂನು ಎಲ್ಲಿದೆ ತೆಗೆಯಿರಿ, ನನ್ನ ಹತ್ತಿರವಿರುವಂತಹ ಕಾನೂನನ್ನು ತೆಗೆದು ತೋರಿಸುತ್ತೇನೆ. ನಿಮ್ಮ ಡಿಪಾರ್ಟ್‌ಮೆಂಟ್ನವರು ನೀವೇ ಹೇಳುತ್ತೀರಿ, 28 ಜನರು ಅರ್ಜಿಯನ್ನು ಹಾಕಿದರು. ಈ 28 ಅರ್ಜಿಗಳನ್ನು ವಜಾ ಮಾಡಿದ್ದೇವೆಂದು ಹೇಳಿದ್ದೀರಿ. 29ನೇ ಅರ್ಜಿಯವನಿಗೆ ಏತಕ್ಕೆ ನೀವು ರಿಲೀಸ್ ಮಾಡಿದಿರಿ? ಈ 28 ಅರ್ಜಿದಾರರ ಗತಿ ಏನಾಗಬೇಕು? ಅವರಿಗೆ ಏನು ಎಲಿಜಿಬಿಲಿಟಿ ಇರಲಿಲ್ಲವೇ? ಇವನೊಬ್ಬನೇ ಏನು ಇರುವಂಥಾದ್ದು? ತಮಿಳುನಾಡು, ಆಂಧ್ರದಿಂದ ಬಂದಂಥವರಿಗೆ ಏನು ಎಲಿಜಿಬಿಲಿಟಿ ಇರುವಂಥಾದ್ದು, ಈ ಕರ್ನಾಟಕದಲ್ಲಿ ಯಾರಿಗೂ ತಾಕತ್ತು ಇರಲಿಲ್ಲವೇ? ದಯಮಾಡಿ ಇದನ್ನು ಹೇಳಿ. ಇದಕ್ಕೆ ತಮಿಳುನಾಡಿನವರು, ಆಂಧ್ರಪ್ರದೇಶದವರೆ ಬೇಕೇ 28 ಅರ್ಜಿದಾರರಿಗೆ ಕೊಡಬಹುದಾಗಿತ್ತಲ್ಲಾ? ಇವರ ಪರಿಸ್ಥಿತಿ ಏನಾಗಾಬೇಕು?

ಶ್ರೀ ಬಿ.ಎಸ್.ಯಡಯೂರಪ್ಪ: ಮಾನ್ಯ ಅಧ್ಯಕ್ಷರೆ, ಇದನ್ನು ಯಾರಿಗೆ ಕೊಟ್ಟಿದ್ದರೂ ಇದು ಅಪರಾಧ. ಇದು ಸಿ.ಬಿ.ಐ. ತನಿಖೆಯಾಗಬೇಕು. ನಮಗೆಲ್ಲಾ ಕೊಟ್ಟಿದ್ದರೆ ಅಡ್ಜೆಸ್ಟ್‌ಮೆಂಟ್ ಮಾಡಿಕೊಳ್ಳಬೇಕೆಂದು ಅರ್ಥನಾ? ಮಾನ್ಯ ಅಧ್ಯಕ್ಷರೆ, ನಾನು ಹೇಳುವಂಥಾದ್ದು ಅರಣ್ಯ ಸಂಪತ್ತನ್ನು ಕಾನೂನು ಬಾಹಿರವಾಗಿ ನೋಟಿಫೈ ಮಾಡದೇನೇ ಸಿಕ್ಕಿಬಿದ್ದು ವಿಥ್ ಡ್ರಾ ಮಾಡಿಕೊಂಡಿದ್ದಾರೆ; ಆದುದರಿಂದ ದಯಮಾಡಿ ಇದನ್ನು ಸಿ.ಬಿ.ಐ. ತನಿಖೆಗೆ ಕೊಡಿ, ಆ ಎಲ್ಲಾ ಡೀಟೈಲ್‌ಗಳನ್ನು ಕೊಡಿ. ಇಲ್ಲಿ ಆ 28 ಜನ ಅರ್ಜಿದಾರರು ಯಾರು, 29ನೇ ಅರ್ಜಿದಾರರು ಯಾರು, ಅವನ ಪಾಲುದಾರರು ಯಾರು? ನಿಮ್ಮ ಕಡೆ ಯಾರ್‍ಯಾರು ಇದ್ದರೆಂಬುದು ನಿಮಗೆ ಗೊತ್ತಾಗುತ್ತದೆ. ಇದನ್ನು ಸಿ.ಬಿ.ಐ. ತನಿಖೆ ಮಾಡಿಸಬೇಕು.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೇ, ಒಬ್ಬ ಅಸಿಸ್ಟೆಂಟ್ ಕಮೀಷನರ್ ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರ್‌ರವರು can he transfer revenue lands worth about Rs.3500/- crores to the Mines &Geology Department? ಹಾಗೆ ಎಲ್ಲಾದರೂ ಅವಕಾಶವಿದೆಯೇ ಎಂದು ಹೇಳಿ. ರೆವಿನ್ಯೂ ಲ್ಯಾಂಡ್ ರೆವಿನ್ಯೂ ಇಲಾಖೆಗೆ ಸಂಬಂಧಿಸಿದ್ದು ಸರ್ಕಾರ ನೋಟಿಫೈ ಮಾಡಬೇಕು. ಇಲ್ಲಿ ಇಷ್ಟು ಕಲ್ಲು ಇದೆ ಯಾರಾದರೂ ಅರ್ಜಿ ಹಾಕಿ ಎಂದು ಕಾನೂನಿನ ಪ್ರಕಾರ ನೋಟಿಫೈ ಮಾಡಬೇಕು. ಮಾನ್ಯ ಸಿಂಧ್ಯರವರೇ, ಕಾನೂನು 8ಎ, 8ಬಿ, ಏನು ಹೇಳುತ್ತದೆಂಬುದನ್ನು

ನೋಡಿ "availability of land belonging to the State Government to be notified for grant.

ಅಧ್ಯಕ್ಷರು: ಇಲಾಖೆಯ ಸೆಕ್ರೆಟರಿಯವರು ಎಲ್ಲಿ; you send for the Secretary to Government.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಯಾವ ಸೆಕ್ರೆಟರಿಯೂ ಬಂದಿಲ್ಲ, ಯಾವ ಡೈರೆಕ್ಟರ್ ಬಂದಿಲ್ಲ, ಎಲ್ಲಾ ರಜಾ ಹಾಕಿಕೊಂಡು ಮನೆಗೆ ಹೋಗಿ ಬಿಟ್ಟಿದ್ದಾರೆ. ಈ ವಿಷಯವಾಗಿ ಗಮನ ಸೆಳೆಯುವ ಸೂಚನೆಯ ಮುಖಾಂತರ ಪ್ರಸ್ತಾಪ ಮಾಡುವಂತಹ ಸಂದರ್ಭ ಬಂದ ತಕ್ಷಣ ನಮಗೆ ಫೋನ್ ಮೇಲೆ ಫೋನ್, ವಿತ್ ಡ್ರಾ ಮಾಡಬೇಕೆಂದು ಮತ್ತೆ ಮಾತು ಎಲ್ಲಾ ಫೈಲ್‌ಗಳನ್ನು ಸ್ವಾಪ್ ಮಾಡಿಸಿಬಿಟ್ಟಿದ್ದಾರೆ, ನಿಮಗೆ ಏನೂ ಗೊತ್ತಿಲ್ಲ. ಆ ಫೈಲ್‌ನಲ್ಲಿ ಮಂಜೂರು ಮಾಡಬೇಕೆಂದು ಸೈನ್ ಇಲ್ಲವೆಂದರೆ ನಾನು ರಾಜೀನಾಮೆ ಕೊಡಲು ತಯಾರಿದ್ದೇನೆಂದು ಹೇಳಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ದಯಮಾಡಿ ಮಾನ್ಯ ಮುಖ್ಯಮಂತ್ರಿಯವರನ್ನು ಸದನಕ್ಕೆ ಕರೆಯಿಸಿ, ಇವರ ಹತ್ತಿರ ಪೂರ್ಣ ಮಾಹಿತಿ ಇಲ್ಲ. ಅವರು ಬರೆದು ಕೊಟ್ಟಿರುವಂಥಾದ್ದನ್ನು ಇವರು ಓದುತ್ತಿದ್ದಾರೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಬಂದು ರಿಪ್ಲೈ ಕೊಡಬೇಕು, ಆಗ ಇದೆಲ್ಲಾ ವಿವರಗಳು ಬಯಲು ಆಗಬೇಕು. ಈಗ ಬೇಕಾದರೆ ಸಭೆಯನ್ನು ಮುಂದೂಡಿ ಮಾನ್ಯ ಮುಖ್ಯಮಂತ್ರಿಯವರು ಬರಲಿ ಎಲ್ಲಾ ವಿವರಗಳು ಟೇಬಲ್ ಮೇಲೆ ಇಡಬೇಕು ಆ ಅಧಿಕಾರಿಗಳು ಯಾರು ಅವರನ್ನು ಕರೆಸಿ ಇದು ಬರೀ ಮೂರೂವರೆಸಾವಿರ ಕೋಟಿ ರೂಪಾಯಿಗಳಷ್ಟೆ ಅಲ್ಲ. ಇವರೆಲ್ಲ ಸೇರಿಕೊಂಡು ಇಡೀ ಕರ್ನಾಟಕವನ್ನೇ ಮುಳುಗಿಸುತ್ತಿದ್ದಾರೆ. ಅದಕ್ಕಾಗಿ ರಾಜೀನಾಮೆಯನ್ನು ಕೊಟ್ಟು ಹೋಗಿ ಎಂದು ಹೇಳುತ್ತಿರುವಂಥಾದ್ದು.

ಅಧ್ಯಕ್ಷರು: ಮಾನ್ಯ ಡಿ.ಕೆ.ಶಿವಕುಮಾರ್‌ರವರು ಹೇಳಿದರು. ಆದರೆ ಕರ್ನಾಟಕ ಅರಣ್ಯ ಕಾಯಿದೆಯಡಿ ನೇಮಿಸಲ್ಪಟ್ಟ ಬಳ್ಳಾರಿ ವಲಯದ ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರ್‌ರವರು ಸದರಿ ಪ್ರದೇಶವನ್ನು ಮೀಸಲು ಅರಣ್ಯ ಪ್ರದೇಶವೆಂದು ಘೋಷಿಸಿದ ಅಧಿಸೂಚನೆಯನ್ನು ಕೈ ಬಿಡಲು ದಿನಾಂಕ: 5-12-1997ರ ಅವರ ಆದೇಶ ಆರ್‌ಎಫ್‌ಡಿಯಲ್ಲಿ ಸೂಚಿಸಿದರು ಎಂದು ಇದೆ, ಅಂದರೆ ಇದನ್ನು ವಾಲಂಟಿಯರ್ ಆಗಿ ಮಾಡಿದ್ದಾರಾ ಅಥವಾ ಯಾರಾದರೂ ಹೇಳಿ ಮಾಡಿಸಿದ್ದಾರಾ, ಆ ಪವರ್ ಆತನಿಗೆ ಇರುತ್ತದಾ, ನಮಗೆ ಯಾರು ಎಂಬುದು ಗೊತ್ತಾಗಲಿಲ್ಲ.

When the allegation is of such a serious nature, ಈ ಡ್ರಾಫ್ಟ್ ಅನ್ನು ಪ್ರಿಪೇರ್ ಮಾಡಿಕೊಡತಕ್ಕಂಥ ನಿಮ್ಮ ಅಧಿಕಾರಿಗಳು they should think of all these things, whether a Forest Settlement

Officer is empowered, did he make the recommendations suo moto or did he do it on somebody else's advice? The Director of Mines & Geology is not present. The Secretary, Industries & Commerce is not present. They cannot take the House so lightly when such a serious matter has come up for discussion.

ಶ್ರೀ ಬಿ.ಎಸ್.ಯಡಿಯೂರಪ್ಪ: ಸರ್, ದಯಮಾಡಿ ಮುಖ್ಯಮಂತ್ರಿಗಳನ್ನು ಕರೆಯಿಸಲು ಸದನವನ್ನು ಹತ್ತು ನಿಮಿಷಗಳ ಕಾಲ ಮುಂದೂಡಿ. ದಯಮಾಡಿ ನಾನು ವಿನಂತಿ ಮಾಡುತ್ತೇನೆ, ಸಿಂಧ್ಯಾರವರ ಹತ್ತಿರ ಯಾವುದೇ ಮಾಹಿತಿ ಇಲ್ಲ, ಹಿರಿಯ ಸದಸ್ಯರಾದ ಸನ್ಮಾನ್ಯ ಪಿ.ಜಿ.ಆರ್.ಸಿಂಧ್ಯಾರವರು ಇವತ್ತು ಸದನವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ಇವತ್ತು ಯಾರೋ ತಿಂದಿದ್ದಕ್ಕೆ ನೀವು ರಕ್ಷಣೆ ಕೊಡುವಂಥ ಕೆಲಸ ಮಾಡುವುದಿಲ್ಲವೆನ್ನುವ ವಿಶ್ವಾಸ ನನಗಿದೆ, ಮುಖ್ಯಮಂತ್ರಿಗಳು ಬರಲಿ ಅದನ್ನು ಸ್ಪಷ್ಟ ಮಾಡಲಿ.

ಶ್ರೀ ಡಿ.ಶಿವಕುಮಾರ್: ಸ್ವಾಮಿ, ಸದನವನ್ನು ಮುಂದೂಡುವ ಪ್ರಶ್ನೆ ಬೇಡ.

ಶ್ರೀ ಬಿ.ಎಸ್.ಯಡಿಯೂರಪ್ಪ: ಹತ್ತು ನಿಮಿಷ ಸದನವನ್ನು ಮುಂದುಡೋಣ, ಮುಖ್ಯಮಂತ್ರಿಗಳು ಸದನಕ್ಕೆ ಬರಲಿ, ದಾಖಲೆಗಳನ್ನೆಲ್ಲಾ ತರಲಿ, ಅವರ್‍ಯಾರು ಇಪ್ಪತ್ತೆಂಟು ಜನ ಅರ್ಜಿದಾರರು, ಇವನ್ಯಾರು?

ಶ್ರೀ ಡಿ.ಕೆ.ಶಿವಕುಮಾರ್: ಬೇರೆಯದಕ್ಕೆ ಸಿ.ಬಿ.ಐ ತನಿಖೆಗೆ ವಹಿಸುತ್ತೀರಿ, ಅವರ್‍ಯಾರೋ ಮಾಜಿ ಮಂತ್ರಿಯ ವಿಚಾರಕ್ಕೆ ತಕ್ಷಣ ಒಂದು ಸಿಬಿಐ ತನಿಖೆಗೆ ಆರ್ಡರ್ ಮಾಡುತ್ತೀರಿ, ಇದು ಮೂರೂರವರೆ ಸಾವಿರ ಕೋಟಿ ರೂಪಾಯಿಗೆ ಸಂಬಂಧಪಟ್ಟಿದ್ದು ಸ್ವಾಮಿ, ಯೂರಿಯಾ ಹಗರಣಕ್ಕಿಂತ ದೊಡ್ಡದು, ಬೋಫೋರ್ಸ್ ಹಗರಣಕ್ಕಿಂತ ದೊಡ್ಡದು, ಎಲ್ಲದಕ್ಕಿಂತ ದೊಡ್ಡದು. ನಮ್ಮ ಅಧಿಕಾರಿಗಳು ಬಹಳ ನಿಸ್ಸೀಮರು, ಕಲೆಕ್ಷನ, ಕಲೆಕ್ಷನ್ ಎಲೆಕ್ಷನ್‌ಗೋಸ್ಕರ, ಬಹಳ ಕಷ್ಟಪಟ್ಟು ಮಾಡಿದರು; ಏನಾಯಿತು ಸ್ವಾಮಿ? ಒಬ್ಬೊಬ್ಬ ಪಿವನ್‌ಗೂ ಕೂಡ ದುಡ್ಡು ಕೊಟ್ಟುಬಿಟ್ಟಾ ಸ್ವಾಮಿ? ಇಂಥ ಕಾಲವನ್ನು ನಾನು ನೋಡಿರಲಿಲ್ಲ. ಏನೋ ಸಣ್ಣ ಸಣ್ಣ ಇಂಡಸ್ಟ್ರೀಸ್‌ರವರ ಹತ್ತಿರ ದುಡ್ಡು ತೆಗೆದುಕೊಳ್ಳುವುದನ್ನೆಲ್ಲಾ ನಾವು ನೋಡಿದ್ದೇವೆ, ಒಬ್ಬೊಬ್ಬ ಪೀವನ್ ಕಲೆಕ್ಟ್ ಮಾಡಿಬಿಟ್ಟ. ಇಂಥ ಪರಿಸ್ಥಿತಿಗೆ ಈ ಸರ್ಕಾರ ಬಂತು ಎಂದರೆ ಹೇಗೆ ಸ್ವಾಮಿ

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಸಭಾಧ್ಯಕ್ಷರೆ, ಈ ಗಮನಸೆಳೆಯುವ ಸೂಚನೆಗೆ ಉತ್ತರವನ್ನು ಕೊಡುವಾಗ ಮಂಜೂರು ಮಾಡಲು ಕೋರಿಕೆಯನ್ನು ಸಲ್ಲಿಸಿದ್ದು ಅರ್ಜಿಯು ಸರ್ಕಾರದ ಪರಿಶೀಲನೆಯಲ್ಲಿದೆ ಎನ್ನುವ ಮಾತನ್ನು ಸಚಿವರು ಹೇಳಿದ್ದಾರೆ.

ಈ ಹೇಳಿಕೆಯನ್ನು ತಾವು ಸಮರ್ಥಿಸಿಕೊಳ್ಳಬೇಕಾಗುತ್ತದೆ. ದಯಮಾಡಿ ಬಹಳ ಪ್ರಮುಖವಾಗಿರತಕ್ಕಂಥ ಒಂದು ವಿಷಯವೇನೆಂದರೆ, ಅರವತ್ತೆರಡು ಎಕರೆ ಜಮೀನನ್ನು ಮೆ:ಶ್ರೀರಂಗ ಕಂಪನಿಗೆ 1979ರಲ್ಲಿ ಮಂಜೂರಾಗಿದೆ. ಈ ಬಗ್ಗೆ ಕೋರ್ಟ್‌ಗೆ ಹೋಗಿದ್ದಂಥ ಸಂದರ್ಭದಲ್ಲಿ ಕೋರ್ಟ್ ನಿಯಮಾವಳಿಗಳ ಪ್ರಕಾರ ಇದನ್ನುಮಂಜೂರು ಮಾಡುವುದಕ್ಕೆ ಅರ್ಹತೆ ಇದ್ದರೆ ಕೊಡಿ ಎಂದು ಹೇಳುತ್ತಾರೆ. ತಾವು ಯಾವಾಗ ನಿಯಮಾವಳಿಗಳನ್ನು ಮಾಡಿದ್ದು ಎನ್ನುವುದನ್ನು ನೋಡಿದಾಗ ತಾವು ನೋಡಿದರೆ,

"Sec.8: Restrictions on grant of renewal for quarrying lease or licence.

"No quarrying licence or lease shall be granted to any person other than Indian citizens, except with the approval of the Central Government. No quarry lease shall be granted in any forest land. This is the restriction. ಆಮೇಲೆ ಹೇಳುತ್ತಾರೆ, ಪೂರ್ವಭಾವಿಯಾಗಿ ಮಂಜೂರು ಮಾಡಬೇಕಾದರೆ ಒಂದು ಕಮಿಟಿಗೆ ಹೀಗೆ ಹೇಳುತ್ತಾರೆ No quarrying lease shall be granted in respect of any land notified by the State Government, ಎನ್ನುವ ಮಾತನ್ನು ಹೇಳಿ "the Competent authority shall be granting renewal licence, consult in case of a specified minor mineral, the Deputy Commissioner of the District Concerned, in case of a non-specified minor mineral, the Tahsildar of the Taluk concerned. The Deputy Commissioner or Tahsildar, as the case may be, shall send his recommendations within 30 days..."

MR. SPEAKER: Mr.Deputy Leader, you are a practising lawyer. ನಾನು ಹೇಳುವುದನ್ನು ಕೇಳಿ, ಅರಣ್ಯ ಭೂಮಿಯಲ್ಲಿ ಕೊಡುವುದಕ್ಕೆ ಅವಕಾಶವಿಲ್ಲ, The second phase is, the Forest Settlement Officer makes a recommendations deleting it from the Forest.

ಶ್ರೀ ಟಿ.ಬಿ.ಜಯಚಂದ್ರ: ಅಧ್ಯಕ್ಷರೆ, ನಾನು ಆ ಅಂಶಕ್ಕೆ ಆನಂತರ ಬರುತ್ತೇನೆ. ಸರ್ಕಾರದ ಮಟ್ಟದಲ್ಲಿರುವಂಥ ಒಂದು ಕಮಿಟಿಯಲ್ಲಿ ಸದಸ್ಯರು ಯಾರ‍್ಯಾರು ಇರುತ್ತಾರೆಂದರೆ, ಹಣಕಾಸು ಇಲಾಖೆಯ ಕಾರ್ಯದರ್ಶಿ, ಕಂದಾಯ ಇಲಾಖೆಯ

ಕಾರ್ಯದರ್ಶಿ, ಅರಣ್ಯ ಇಲಾಖೆಯ ಕಾರ್ಯದರ್ಶಿ, ನಿರ್ದೇಶಕರು, ಮೈನ್ಸ್ ಅಂಡ್ ಜಿಯಾಲಜಿ ಇವರೆಲ್ಲರೂ ಆ ಸಮಿತಿಯಲ್ಲಿರುವಂಥ ಸಂದರ್ಭದಲ್ಲಿ ಎನ್.ಓ.ಸಿ.ಯನ್ನು ಕೂಡ ಡಿ.ಸಿ.ಯಿಂದ ತರಿಸಿಕೊಳ್ಳದೆ ಇವತ್ತು ಅರಣ್ಯ ಭೂಮಿಯನ್ನು ಕೊಡುವ ಒಂದು ತೀರ್ಮಾನವನ್ನು, ಶಿಫಾರಸ್ಸನ್ನು ಮಾಡಿದ್ದಾರೆ. ಇವತ್ತು ಈ ಅರಣ್ಯ ಭೂಮಿಯನ್ನು ಮಂಜೂರು ಮಾಡುವುದಕ್ಕೆ ನಿಮಗೆ ಯಾವ ರೀತಿಯಾದ ಅಧಿಕಾರವಿದೆ ಎಂದು ನಾನು ಕೇಳುತ್ತೇನೆ. ಆ ಸಮಿತಿಯಲ್ಲಿ ಅರಣ್ಯ ಇಲಾಖೆಯ ಕಾರ್ಯದರ್ಶಿಗಳು ಸದಸ್ಯರಾಗಿದ್ದಂಥ ಸಂದರ್ಭದಲ್ಲಿ, ಅವರು ಯಾವ ರೀತಿಯಾದಂಥ ಶಿಫಾರಸ್ಸನ್ನು ಮಾಡಿದರು? ಆ ಸಮಿತಿಯಲ್ಲಿ ಶಿಫಾರಸ್ಸು ಆಗಿರುವುದು ಮಾತ್ರವಲ್ಲ, ಶಿಫಾರಸ್ಸಾಗಿ, ಸರ್ಕಾರದ ಒಪ್ಪಿಗೆಯಾಗಿ ಇಶ್ಯೂ ಆಗಿ ಅದು ಕಾರ್ಯಗತವಾಗುವಂಥ ಸಂದರ್ಭದಲ್ಲಿ ಇದನ್ನು ಇವತ್ತು ತಡೆಹಿಡಿದಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಅದಕ್ಕೆ ನಾನು ತಮ್ಮ ಮಾತನ್ನು, ವಾದವನ್ನು ಸಮರ್ಥಿಸಿಕೊಳ್ಳಬೇಕೆನ್ನುವ ಮಾತನ್ನು ಹೇಳುತ್ತೇನೆ. ಇದೆಲ್ಲಕ್ಕಿಂತ ಮುಖ್ಯವಾಗಿರುವುದೇನೆಂದರೆ, ಈ ಮೆ: ಶ್ರೀರಂಗ ಅಂಡ್ ಕಂಪನಿಯ ಜೊತೆಗೆ ಬೇರೆ ಇಪ್ಪತ್ತೆಂಟು ಜನರು ಕೂಡ ಅರ್ಜಿಗಳನ್ನು ಹಾಕಿದ್ದಾರೆ. ನೀವು ಎಲ್ಲರ ಅರ್ಜಿಗಳನ್ನು ಕೂಡ ತಿರಸ್ಕರಿಸುತ್ತೀರಿ, ಎಂಡಾರ್ಸ್‌ಮೆಂಟ್ ಕೊಡುತ್ತೀರಿ. ಈ ಎಂಡಾರ್ಸ್‌ಮೆಂಟ್ ಕೊಟ್ಟಾದ ಮೇಲೆ ಏಕಾಏಕಿ ಒಂದೇ ಒಂದು ಕಾರಣವೆಂದರೆ, ನೀವು ಮೆ: ಶ್ರೀರಂಗ ಅಂಡ್ ಕಂಪನಿಯವರ ಅರ್ಜಿಯನ್ನು ಕೂಡ ಎಸ್‌ಎಸ್‌ಐ ಸರ್ಟಿಫಿಕೇಟ್ ಇಲ್ಲವೆಂದು ತಿರಸ್ಕರಿಸುತ್ತೀರಿ. ಇನ್ನು ಹದಿನೈದು ದಿವಸಗಳಲ್ಲಿ ಮೂರನೇ ದಿವಸ ಆ ಕಮಿಟಿಯಲ್ಲಿ ಅದೊಂದೇ ಅರ್ಜಿಯನ್ನು ಇಟ್ಟುಕೊಂಡು ಇವತ್ತು ಐವತ್ತು ಎಕರೆ ಜಮೀನನ್ನು ಮಂಜೂರು ಮಾಡಬಹುದೆನ್ನುವ ಒಂದು ತೀರ್ಮಾನವನ್ನು ಮಾಡುವುದಾದರೆ ನಾವು ಕೇಳುತ್ತೇವೆ ಇದು ಕಾನೂನಿನ ಪ್ರಕಾರ ಇರಬೇಕಾದದ್ದು, ಇವತ್ತು ಈ ಕಾನೂನಿನ ವ್ಯಾಪ್ತಿಯಲ್ಲಿ ನಿಮ್ಮ ಅಧಿಕಾರಿಗಳು ವರ್ತಿಸಬೇಕಾಗುತ್ತದೆ. ಫಾರೆಸ್ಟ್ ಕನ್ಸರ್ವೇಷನ್ ಆ್ಯಕ್ಟ್ ಅನ್ನು ಉಲ್ಲಂಘನೆ ಮಾಡತಕ್ಕಂಥ ಅಧಿಕಾರವನ್ನು ಚಲಾಯಿಸಿರತಕ್ಕಂಥ ಅಧಿಕಾರಿಗಳ ಮೇಲೆ ನೀವು ಏನು ಕ್ರಮ ಕೈಗೊಳ್ಳುತ್ತೀರಿ ಎನ್ನುವುದನ್ನು ದಯವಿಟ್ಟು ಹೇಳುತ್ತೀರಾ? ಮತ್ತು ಈಗಾಗಲೇ ಇಪ್ಪತ್ತೆಂಟು ಅರ್ಜಿಗಳನ್ನು ತಿರಸ್ಕರಿಸಿ, ಎಂಡಾರ್ಸ್‌ಮೆಂಟ್ ಇವತ್ತು ಕೊಟ್ಟಿದ್ದೀರಿ. ಎಂಡಾರ್ಸ್‌ಮೆಂಟ್ ಕೊಟ್ಟ ಮೇಲೆ ಇವತ್ತು ಏಕಾಏಕಿಯಾಗಿ ಒಂದು ಅರ್ಜಿಯನ್ನು ತೂರಿಸಿ, ಒಂದೇ ಕಮಿಟಿನಲ್ಲಿ ಇಟ್ಟುಕೊಡತಕ್ಕಂಥ ತೀರ್ಮಾನ ಮಾಡಿದರೆ ನಾವು ಏನು ಅರ್ಥ ಮಾಡಿಕೊಳ್ಳಬೇಕು? ಇವತ್ತು ನಿಜವಾಗಲು ಮೆ: ಶ್ರೀರಂಗ ಅಂಡ್ ಕಂಪನಿ ಎಂದರೆ ಇವತ್ತು ಶ್ರೀರಂಗನೇ ಬಂದು ಅದನ್ನು ಕೊಡಿಸತಕ್ಕಂಥ ಕೆಲಸವನ್ನು ಮಾಡುತ್ತಿದ್ದಾನೆ ಎನ್ನುವ ಭಾವನೆ ನಮಗೆ ಬರುತ್ತಿದೆ. ಇದೆಲ್ಲಕ್ಕಿಂತ ಮುಖ್ಯವಾಗಿ, ಇವತ್ತು ಮುಖ್ಯಮಂತ್ರಿಗಳ ಒಪ್ಪಿಗೆ ಕೂಡ ಆಗಿದೆ, ಸರ್ಕಾರದ ಆಜ್ಞೆ ಕೂಡ ಆಗಿದೆ ಎಂದು ನಾನು ಹೇಳುತ್ತಿದ್ದೇನೆ. ಇದನ್ನು ನೀವು ಎಷ್ಟೇ ಸಮರ್ಥಿಸಿಕೊಂಡರೂ ಇದು ಸರಿಯಾಗುವುದಿಲ್ಲ. ಈಗಾಗಲೇ ಮೂರೂವರೆಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚಿಗೆ ನಿಕ್ಷೇಪ ಏನಿದೆ ಅದರಿಂದ ನೂರಾರು ಕೋಟಿ

ರೂಪಾಯಿಗಳು ಸರ್ಕಾರಕ್ಕೆ ಲಾಭವಾಗುವಂಥ ಸಂದರ್ಭವಿರುವುದರಿಂದ ಯಾವುದೇ ಎನ್.ಓ.ಸಿ.ಯನ್ನು ತೆಗೆದುಕೊಳ್ಳದೆ ನಿಮ್ಮ ಅಧಿಕಾರಿಗಳು ವರ್ಗ ಮಾಡಿರಬೇಕಾದರೆ, ಇವತ್ತು ಏಕಾಏಕಿಯಾಗಿ ಎಲ್ಲಾ ಕಾನೂನುಗಳನ್ನು, ಕೇಂದ್ರಸರ್ಕಾರಕ್ಕೆ ಇರುವ ಅಧಿಕಾರವನ್ನು ಇವತ್ತು ಮುರಿದು ನೀವೇ ಕೈಗೆತ್ತಿಕೊಂಡು ಇವತ್ತು ಮಂಜೂರು ಮಾಡುವಂಥ ವಿಶೇಷ ಆಸಕ್ತಿಯನ್ನು ತೋರಿಸಿರುವುದು ನೋಡಿದರೆ ಬಹುಶಃ ಇದರಲ್ಲಿ ಏನೋ ಗುಪ್ತವಾಗಿ ನಡೆದಿದೆ ಎನ್ನುವ ಒಂದು ಭಾವನೆ ಕೂಡ ನಮ್ಮಲ್ಲಂತೂ ಬರುತ್ತಿದೆ. ಅದಕ್ಕಾಗಿ ಸಿ.ಬಿ.ಐ ಎನ್‌ಕ್ವೈರಿಯನ್ನು ಸದಸ್ಯರಾದ ಶಿವಕುಮಾರ್‌ರವರು ಹೇಳಿದ ರೀತಿಯಲ್ಲಿ ಮಾಡಬೇಕೆಂದು ನಾವು ಒತ್ತಾಯಿಸುತ್ತಿದ್ದೇವೆ. ದಯಮಾಡಿ ಆ ದಾಖಲೆಗಳನ್ನೆಲ್ಲಾ ಪ್ಲೇಸ್ ಮಾಡಿ, ಇವತ್ತು ಸಿ.ಬಿ.ಐ. ತನಿಖೆ ಆಗಲೇಬೇಕೆನ್ನುವ ಮಾತನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಿಂದ ಎರಡು ಕ್ಲಾರಿಫಿಕೇಷನ್ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಒಂದು, Committees constituted under Rule 11. Once application filed by Sri Ranga Industries is rejected, what are the changed circumstances to consider the same application for the 2nd time. ಎರಡನೆಯದು, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಶ್ರೀರಂಗ ಇಂಡಸ್ಟ್ರೀಸ್‌ರವರು 1991ರಿಂದಲೇ ಸಣ್ಣ ಪ್ರಮಾಣದ ಕೈಗಾರಿಕಾ ಘಟಕವನ್ನು ಹೊಂದಿದ ಬಗ್ಗೆ ದಾಖಲೆಗಳನ್ನು ಒದಗಿಸಿ ಎನ್ನುವ ಮಾತನ್ನು ತಾವು ಹೇಳಿದ್ದೀರಿ. ನನಗೆ ಒಂದು ಕ್ಲಾರಿಫಿಕೇಷನ್ ಏನು ಬೇಕಾಗಿದೆ ಎಂದರೆ, ದಿನಾಂಕ: 24-6-1995ರಲ್ಲಿ ಈ ಒಂದು ಕಮಿಟಿ, constituted under rule 11, whether a statement was made by this Sri Ranga Industries that they have any small scale industries and as such they requested for the rejection of their application. ಏಕೆಂದರೆ, ತಾವು ತಮ್ಮ ಉತ್ತರದಲ್ಲೇ ತಾವು ಏನು ಹೇಳಿದ್ದೀರೆಂದರೆ 1991 ರಿಂದಲೇ ಒಂದು ಸಣ್ಣ ಕೈಗಾರಿಕೆಯನ್ನು ನಾವು ನಡೆಸುತ್ತಿದ್ದವು ಎನ್ನುವ ಒಂದು ಹೇಳಿಕೆಯನ್ನು ತಾವು ಕೊಟ್ಟಿದ್ದೀರಿ, ಆದರೆ ನನಗೆ ಏನು ಕ್ಲಾರಿಫಿಕೇಷನ್ ಬೇಕಾಗಿದೆ ಎಂದರೆ ದಿನಾಂಕ: 24-6-1995ರಲ್ಲಿ ನಡೆದಂಥ ಈ ಕಮಿಟಿಯ ಮುಂದೆ ಶ್ರೀರಂಗ ಇಂಡಸ್ಟ್ರೀಸ್‌ರವರು, ನಾವು ಯಾವುದೇ ಒಂದು ಸಣ್ಣ ಕೈಗಾರಿಕೆಯನ್ನು ನಡೆಸುತ್ತಿಲ್ಲ ಎನ್ನುವ ಹೇಳಿಕೆಯನ್ನು ಕೊಟ್ಟಿರುವುದರಿಂದ ಆವತ್ತು ಅವರ ಅರ್ಜಿ ಪರಿಗಣಿಸಿಲ್ಲ. ದಯಮಾಡಿ ಈ ಗೊಂದಲದ ಬಗ್ಗೆ ಮಾನ್ಯ ಸಚಿವರು ಕ್ಲಾರಿಫಿಕೇಷನ್ ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮೊದಲನೆಯದಾಗಿ, ಬಹಳ ಮುಖ್ಯವಾಗಿ ಸದನದ ಗಮನಕ್ಕೆ ತರಬೇಕಾಗಿರುವಂಥದ್ದು, ಈ ಒಂದು ನಲವತ್ತು ಎಕರೆ ಜಮೀನನ್ನು

ಯಾವುದೇ ಕಾರಣದಿಂದಲೂ ಯಾವುದೇ ಹಂತದಲ್ಲೂ ಕೂಡ ಇನ್ನೂ ಮಂಜೂರಾತಿಯನ್ನು ಮಾಡಿಲ್ಲ, ಇದರ ಗುತ್ತಿಗೆಯನ್ನು ಕೊಟ್ಟಿಲ್ಲ. ಇವರೇನು, ನೀವು ಕೊಟ್ಟು ಬಿಟ್ಟಿದ್ದೀರಾ, ಶಾಮೀಲಾಗಿದ್ದೀರಾ, ಕಾಣದ ಕೈಗಳಿವೆ ಎನ್ನುವ ಆಪಾದನೆಗಳನ್ನು ಮಾಡುತ್ತಿದ್ದಾರೆ ಇದು ಸಂಪೂರ್ಣವಾಗಿ ಸತ್ಯಕ್ಕೆ ದೂರವಾದ ಒಂದು ವಿಚಾರ. ಇವರಲ್ಲಿ ಏನು ಅರ್ಥವಿಲ್ಲ, ಸರ್ಕಾರ ಯಾವುದೇ ಆಜ್ಞೆಯನ್ನು ಕೂಡ ಸರ್ಕಾರ ಮಾಡಿಲ್ಲ. ಸರ್ಕಾರ ಆಜ್ಞೆಯನ್ನು ಮಾಡದಿರುವುದರಿಂದ ಇಲ್ಲಿ ವಿತ್‌ಡ್ರಾ ಮಾಡತಕ್ಕಂಥ ಪ್ರಶ್ನೆ ಎಲ್ಲಿ ಬರುತ್ತದೆ? ತಾವು ಸರ್ಕಾರದ ಆಜ್ಞೆ ಇದೆ ಎಂದು ಹೇಳುತ್ತೀರಿ, ಅದನ್ನು ತೋರಿಸಿ. ನಮಗೆ ಬಂದಿರುವ ಮಾಹಿತಿಯ ಪ್ರಕಾರ ನಾನು ಹೇಳುತ್ತಿದ್ದೇನೆ. ಇದಾದ ಮೇಲೆ ಅದನ್ನು ಶ್ರೀರಂಗ ಇಂಡಸ್ಟ್ರೀಸ್‌ಗೆ 1979ನೇ ಇಸವಿಯಲ್ಲಿ ಮಂಜೂರಾತಿಯಾಗಿ, ಐದು ವರ್ಷವಾಗಿದೆ. ಅದಾದ ಮೇಲೆ ಯಾರಿಗೂ ಗುತ್ತಿಗೆ ರಿನ್ಯೂವಲ್ ಮಾಡತಕ್ಕಂಥ ಪ್ರಶ್ನೆ ಬಂತು. ರಿನ್ಯೂವಲ್‌ಗೋಸ್ಕರ ಆಗಿದ್ದಂಥ ಕಾನೂನು ಪ್ರಕಾರ 1984ನೇ ಇಸವಿಯಲ್ಲಿ ರಿನ್ಯೂವಲ್ ಮಾಡುವುಕ್ಕೆ ಸರ್ಕಾರಕ್ಕೆ ಅಧಿಕಾರವಿರಲಿಲ್ಲ. ಇದಾದ ನಂತರ ಸರ್ಕಾರ ಯಾವಾಗ ಇದನ್ನು ಕನ್‌ಸಿಡರ್ ಮಾಡಿದೆ ಎಂದರೆ, ಕೋರ್ಟ್‌ನಿಂದ ಆದೇಶ ಬಂದ ಮೇಲೆ ಸರ್ಕಾರ ಇದನ್ನು ಕನ್‌ಸಿಡರ್ ಮಾಡಿದೆಯೇ ಹೊರತು, ಬಾಕಿ ಯಾವ ಸಂದರ್ಭದಲ್ಲೂ ಸಹಿತ ಮಾಡಿರತಕ್ಕದ್ದಲ್ಲ. 1995ನೇ ಇಸವಿಯಲ್ಲಿ 10 ಎಕರೆ ಜಮೀನನ್ನು ಏನು ಇವರಿಗೆ ಮಂಜೂರಾತಿ ಮಾಡಿದ್ದೇವೆ, ಅದಿನ್ನೂ ಸಹಿತ ಅವರಿಗೆ ಹ್ಯಾಂಡ್ ಓವರ್ ಮಾಡತಕ್ಕ ಕೆಲಸವನ್ನು ಇಲಾಖೆಯವರು ಇದುವರೆಗೂ ಮಾಡಲಿಕ್ಕಾಗಿಲ್ಲ. ಅದನ್ನೂ ಕೂಡ ನಾನಿಲ್ಲಿ ಹೇಳುತ್ತಿದ್ದೇನೆ. ತಾವು ಏನೋ ಒಂದು ಊಹಾಪೋಹಗಳನ್ನು ಮಾಡಿಕೊಂಡು ವಸೂಲಾತಿ ಮಾಡಿದರು, ಮತ್ತೊಂದು ಮಾಡಿದರು ಎಂದು ಇದನ್ನೆಲ್ಲಾ ಇಲ್ಲಿ ಹೇಳುತ್ತಿದ್ದೀರಿ. ಇದಕ್ಕೇನೂ ಅರ್ಥ ಇಲ್ಲ. ಸರ್ಕಾರ ಇನ್ನೂ ಆಜ್ಞೆಯನ್ನೂ ಮಾಡಿಲ್ಲ. ಇನ್ನು ಡೀನೋಟಿಫೈ ಮಾಡಲಿಕ್ಕೆ ಆ ಅಧಿಕಾರಿಗೆ ಅಧಿಕಾರ ಇದೆಯೇ? ಎಂಬ ಪ್ರಶ್ನೆಯನ್ನು ಕೇಳಿದ್ದೀರಿ. ಇದರ ಬಗ್ಗೆ ತನಿಖೆ ಮಾಡಬೇಕಾಗುತ್ತದೆ. ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆ ಅಧಿಕಾರಿಗೆ ಇಂತಹ ರೆಕಮೆಂಡ್ ಮಾಡಲಿಕ್ಕೆ ಅಥಾರಿಟಿ ಇದೆಯೋ ಅಥವ ಇಲ್ಲವೋ ಎಂಬುದನ್ನು ತಾವು ಕೇಳಿದ್ದೀರಿ...

ಅಧ್ಯಕ್ಷರು: ಈ ಪ್ರಕರಣದಲ್ಲಿ ಕಾನೂನಿನ ವ್ಯಾಪ್ತಿಯ ಪ್ರಶ್ನೆ ಒಂದೆಡೆ ಇದೆ. ಒಂದು ವೇಳೆ ಆ ಅಧಿಕಾರಿಗೆ ಅಧಿಕಾರ ಇದ್ದರೂ ಕೂಡ ಆತ ಸ್ವಯಂಪ್ರೇರಿತನಾಗಿ ಈ ಶಿಫಾರಸ್ಸನ್ನು ಮಾಡಿದ್ದಾನಾ? ಅಥವಾ ಬೇರೆ ಯಾವುದಾದರೂ ಕಾರಣಗಳಿಂದ ಮಾಡಿದ್ದಾನೆಯೇ?

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೇ, ತಾವು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದರ ಬಗ್ಗೆ ಸರ್ಕಾರ ವಿಚಾರಣೆ ಮಾಡುತ್ತದೆ. ಕೇವಲ ಜಮೀನು ಮಂಜೂರು ಮಾಡಲಾಗಿದೆ ಎಂಬ ಊಹಾಪೋಹದ ಆಧಾರದ ಮೇಲೆ ಸಿ.ಬಿ.ಐ.

ತನಿಖೆಯಾಗಲೀ ಅಥವಾ ಮತ್ತೊಂದು ತನಿಖೆಯಾಗಲೀ ಮಾಡುವಂತಹ ಅವಶ್ಯಕತೆ ಇಲ್ಲ. 3,700 ಕೋಟಿ ರೂಪಾಯಿಗಳ ಈ ಖನಿಜ ಸಂಪತ್ತನ್ನು ಸರ್ಕಾರಕ್ಕೆ ಉಳಿಸಬೇಕೆಂಬ ಕಾಳಜಿ ನಿಮಗೆಷ್ಟು ಇದೆಯೋ ಅಷ್ಟೇ ಕಾಳಜಿ ಸರ್ಕಾರಕ್ಕೂ ಸಹಿತ ಇದೆ. ನಾವು ಮತ್ತು ನೀವು ಇಬ್ಬರೂ ಸೇರಿಕೊಂಡು ಅದನ್ನು ಉಳಿಸಿಕೊಳ್ಳೋಣ. ನಾವೇನೋ ಮಾಡಿ ಬಿಟ್ಟಿದ್ದೇವೆ, ಎಲ್ಲೋ ಕಾಣದ ಕೈಗಳು ಕಾಣುತ್ತಿವೆ, ಆಡಳಿತ ಪಕ್ಷದವರು ಶಾಮೀಲಾಗಿದ್ದಾರೆ ಎಂಬುದ್ಯಾವುದೂ ಇದರಲ್ಲಿ ಇಲ್ಲ. ಇದರಲ್ಲಿ ಯಾವುದೇ ತರಹದ ಅರ್ಥವಿಲ್ಲ. 1979ರಲ್ಲಿ ಇದು ಮಂಜೂರು ಮಾಡಲಾಗಿದೆ, ಈಗಲ್ಲ. ಆಗ ಇವರೆಲ್ಲಾ ಏನು ಮಾಡುತ್ತಿದ್ದರು? ಆಗ ಯಾರ್ಯಾರಿದ್ದರು? ಅವರ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡತಕ್ಕದ್ದು ಅನಾವಶ್ಯಕ. ನಾವು ಮತ್ತು ನೀವು ಸೇರಿಕೊಂಡು ಸರ್ಕಾರದ ಈ ಆಸ್ತಿಯನ್ನು ಉಳಿಸಿಕೊಳ್ಳಬೇಕಾಗುತ್ತದೆ. ಅದಕ್ಕೆ ನಾವು ಏನು ಬೇಕಾದರೂ ಪ್ರಯತ್ನ ಮಾಡೋಣ. ಇದರ ಬಗ್ಗೆ ಇನ್ನೇನಾದರೂ ಮಾಹಿತಿಗಳು ಬೇಕಾದರೆ ನಾನು ತಮ್ಮ ಕಛೇರಿಗೆ ಒದಗಿಸಿಕೊಡಲಿಕ್ಕೆ ತಯಾರಿದ್ದೇನೆ.

ಶ್ರೀ ಡಿ.ಕೆ.ಶಿವಕುಮಾರ್: ಅವರಿಗೆ ಜಮೀನನ್ನು ಮಂಜೂರು ಮಾಡಬೇಕೆಂದು ಕೋರ್ಟ್ ಆರ್ಡರ್‌ನಲ್ಲಿ ಎಲ್ಲಿ ಹೇಳಿದೆ? ಕೋರ್ಟ್ ಆರ್ಡರ್ ಏನಿದೆ ಎಂಬ ಬಗ್ಗೆ ದಯವಿಟ್ಟು ನಮಗೆ ಹೇಳಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಕೋರ್ಟ್ ತನ್ನ ಆದೇಶದಲ್ಲಿ ನಿಯಮಾವಳಿಗಳ ಪ್ರಕಾರ ಡಿಸ್ಪೋಸ್ ಮಾಡಿ ಎಂದು ಹೇಳಿದೆ. ಅದರಂತೆ ನಾವು ಡಿಸ್ಪೋಸ್ ಮಾಡುತ್ತಿದ್ದೇವೆ. we have not disposed off.

ಶ್ರೀ ಡಿ.ಕೆ.ಶಿವಕುಮಾರ್: ಕೋರ್ಟ್‌ನವರು ಇವರಿಗೆ ಕೊಡಿ ಎಂದು ಹೇಳಿದ್ದಾರೆಯೇ? ನಿಮ್ಮ ರೂಲ್ಸ್ ಏನಿದೆ ಎಂಬುದನ್ನು ಸ್ವಲ್ಪ ಹೇಳಿ ನೋಡೋಣ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ಇಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡದೇ ಇದ್ದಿದ್ದರೆ ಒಳಗೆಲ್ಲಾ ವ್ಯವಸ್ಥೆ, ಅಡ್ಜಸ್ಟ್‌ಮೆಂಟ್ ಆಗುತ್ತಿತ್ತು. ನೀವು ಈಗಾಗಲೇ ಈ ಬಗ್ಗೆ ತೀರ್ಮಾನ ಮಾಡಿದ್ದೀರಿ. ಅದಕ್ಕೆ ಸಂಬಂಧಪಟ್ಟ ಕಡತವನ್ನು ನೀವು ಇಲ್ಲಿ ಸಭೆಯ ಮುಂದಿಡಬೇಕು. ಈ ಬಗ್ಗೆ ಸಿ.ಬಿ.ಐ. ತನಿಖೆ ಮಾಡಿದರೆ ಎಲ್ಲಾ ಸತ್ಯ ಸಂಗತಿ ಹೊರಗೆ ಬರುತ್ತದೆ. ನೀವು ಎಲ್ಲವನ್ನೂ ಮುಚ್ಚಿ ಹಾಕಲು ಪ್ರಯತ್ನಿಸುತ್ತಿದ್ದೀರಿ. ಇಂತಹ ಹತ್ತಾರು ಹಗರಣಗಳು ಆಗಿವೆ. ಅವನ್ನು ಮುಚ್ಚಿ ಹಾಕಲಿಕ್ಕೆ ನೀವು ಹೊರಟಿದ್ದೀರಿ. ಮಾನ್ಯ ಸಚಿವರು ಫೈಲ್‌ನಲ್ಲಿ ಆರ್ಡರ್ ಮಾಡಿದ್ದಾರೆ. ಆ ಫೈಲ್ ಇಲ್ಲಿಗೆ ತರಿಸಿ. ಮಾನ್ಯ ಮುಖ್ಯಮಂತ್ರಿಗಳನ್ನು ಸದನಕ್ಕೆ ಕರೆಸಿ. ಫೈಲ್ ನೋಡಿದರೆ ಎಲ್ಲಾ ಗೊತ್ತಾಗುತ್ತದೆ. ಈ ಬಗ್ಗೆ ಆದೇಶ ಆಗಿದೆ, ಮಂಜೂರಾತಿ ಆಗಿದೆ. ಇದನ್ನು ಮುಚ್ಚಿ ಹಾಕುವಂತಹ

ಉದ್ದೇಶಪೂರ್ವಕವಾದ ಪ್ರಯತ್ನವನ್ನು ನೀವು ಮಾಡುತ್ತಿದ್ದೀರಿ, ಆದುದರಿಂದ ಇದರ ಬಗ್ಗೆ ಸಿ.ಬಿ.ಐ. ತನಿಖೆ ಆಗಬೇಕು.

SRI P.G.R.SINDIA: It amounts to contempt and also privilege. I have made it very clear that the government has not given an inch of land.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾವು ಎಲ್ಲಾ ವಿವರಗಳನ್ನೂ ನಿಮಗೆ ಕೊಡುತ್ತೇವೆ. ನೀವು ಸಿ.ಬಿ.ಐ.ತನಿಖೆಗೆ ಒಪ್ಪಿಕೊಳ್ಳಿ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಕೊಟ್ಟಿರುವ ಜಮೀನು 62 ಎಕರೆಯಷ್ಟು ಇದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅದು 1979ರಲ್ಲಿ ಕೊಟ್ಟಿದ್ದು

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದಾದ ಮೇಲೆ 50 ಎಕರೆ ಕೊಡಬೇಕೆಂದು ರೆಕಮೆಂಡ್ ಆಗಿದೆ. ಇದು ಏನೇ ಇರಲಿ. ಪದೇ ಪದೇ ಇದರ ಬಗ್ಗೆ ಸಂಬಂಧಪಟ್ಟ ರೆರ್ಕಾಡ್ಸ್ ಕೊಡಿ ಎಂದು ನಾವು ನಿಮಗೆ ಕೇಳುವುದಕ್ಕಿಂತಲೂ, ಡಿಟೈಲ್ಲಾಗಿ ಇದರ ಬಗ್ಗೆ ಎನ್‌ಕ್ವೈರಿ ಆಗಲಿ. You refer it to the CBI. Why can't you do it?

(ಗೊಂದಲ)

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಯಾರೋ ಒಬ್ಬ ಆಫೀಸರ್ ಅದನ್ನು ಕೊಡಬಹುದು ಎಂದು ಹೇಳಿದಾಕ್ಷಣ ನಾವು ಅದನ್ನು ಸಿ.ಬಿ.ಐ. ಎನ್‌ಕ್ವೈರಿ ಮಾಡಲಿಕ್ಕಾಗುತ್ತದೆಯೇ? ಅವರಿಗೆ ಅಥಾರಿಟಿ ಇದೆಯೋ, ಇಲ್ಲವೋ, ಏಕೆ ರೆಕಮೆಂಡ್ ಮಾಡಿದರು? ಅದನ್ನು ನೋಡಬೇಕಾಗುತ್ತದೆ.

(ಗೊಂದಲ)

MR. SPEAKER: You have come to the point. You have rightly said now on behalf of the government that ಯಾರೋ ಒಬ್ಬ ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರ್ ಬರೆದ ಮಾತ್ರಕ್ಕೆ that is not the end of it. By chance, Forest Settlement Officer ಬರೆದ ರೆಕಮೆಂಡೇಷನ್ ಅನ್ನು ಇವರು ಕನ್‌ಸಿಡರ್ ಮಾಡಿಕೊಂಡು ರೂಲ್ 11ರ ಪ್ರಕಾರ

ಕಮಿಟಿ ಮುಂದೆ ಇಟ್ಟು, ಇದನ್ನು ಕನ್‌ಸಿಡರ್ ಮಾಡಿದರೆ, then alongwith this Forest Settlement Officer ಆ ರೂಲ್ 11ರ ಕಮಿಟಿಯಲ್ಲಿ ಯಾರ‍್ಯಾರು ಆಫೀಸರ್ ಇರುತ್ತಾರೋ they should also be dealt with because they are all very senior officers of high rank.

SRI P.G.R.SINDHIA: Certainly. If they have done anything illegal, they have to be punished.

(ಗೊಂದಲ)

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೇ, ದಿನಾಂಕ 1.1.98ರಂದು ನಡೆದ ಒಂದು ಕಮಿಟಿಯ ಪ್ರೊಸೀಡಿಂಗ್ಸ್ ಅನ್ನು ನಾನು ತಮಗೆ ಕಳುಹಿಸಿಕೊಡುತ್ತಿದ್ದೇನೆ. ತಾವು ದಯವಿಟ್ಟು ಅದನ್ನು ಓದಬೇಕು. ಆ ಸಮಿತಿ ಸಭೆಯಲ್ಲಿ ಅರಣ್ಯ ಕಾರ್ಯದರ್ಶಿ, ಅರಣ್ಯಾಧಿಕಾರಿಗಳು, ಡಿ.ಎಂ.ಜಿ. ಮೊದಲಾದವರು ಇದ್ದರು. ದಿನಾಂಕ 30.12.97ರಂದು ಮೆ: ಶ್ರೀರಂಗ ಇಂಡಸ್ಟ್ರೀಸ್‌ನವರು ಎಸ್‌ಎಸ್‌ಐ ಸರ್ಟಿಫಿಕೇಟ್ ತಂದು ಕೊಡುತ್ತಾರೆ. ಮೀಟಿಂಗ್ ನಡೆಯುವ ಒಂದು ದಿನ ಮುಂಚಿತವಾಗಿ ಈ ಪತ್ರ ಬರುತ್ತದೆ. ಒಂದು ದಿನ ಆದಮೇಲೆ ಅಧಿಕಾರಿಗಳ ಈ ಕಮಿಟಿ ಕುಳಿತುಕೊಳ್ಳುತ್ತದೆ. ಕಮಿಟಿ ಸಭೆ ಸೇರಿ ಏನು ತೀರ್ಮಾನ ತೆಗೆದುಕೊಳ್ಳುತ್ತಾರೆಂದರೆ, M/s. Sriranga Industries in their letter dated 30.12.1997 have stated that they have a small scale unit and requested to consider the application in their favour. A copy of the SSI certificate is enclosed. After considering all the facts and detailed discussing, the Committee resolved to recommend to the Government for renewal of quarry lease over an extent of 40 acres of land in respect of Survey No.49/1 in favour of M/s. Sriranga Industries for a period of 10 years.

ಅಧ್ಯಕ್ಷರು: ಮಾನ್ಯ ಶಿವಕುಮಾರ್‌ರವರೇ, ಒಂದು ನಿಮಿಷ ಇರಿ, ನಾನು ಮಾನ್ಯ ಮಂತ್ರಿಗಳಿಗೆ ಕೇಳಬಯಸುವುದೇನೆಂದರೆ ದಿನಾಂಕ 1.1.98ರಂದು ರೂಲ್ 11ರ ಪ್ರಕಾರ ಕಮಿಟಿ ಸಭೆ ಸೇರಿತ್ತೇ? ದಿನಾಂಕ 1.1.98ರಂದು ರೂಲ್ 11ರ ಕಮಿಟಿ ಒಂದು ವೇಳೆ ಸಭೆ ಸೇರಿದ್ದರೆ ಆ ಸಭೆಯಲ್ಲಿ 30ನೇ ತಾರೀಖಿಗೆ ಎಸ್‌ಎಸ್‌ಐ ಯೂನಿಟ್ ಇದೆ ಎಂದು ಸರ್ಟಿಫಿಕೇಟ್ ತಂದು ಕೊಟ್ಟರೆ ಮೆ: ಶ್ರೀ ರಂಗ ಇಂಡಸ್ಟ್ರೀಸ್‌ನ ಸಬ್ಜೆಕ್ಟ್ ಚರ್ಚೆಗೆ ಬಂದಿತ್ತೇ? ಹಿಂದಿನ ದಿವಸ ಸರ್ಟಿಫಿಕೇಟ್ ಕೊಟ್ಟು ಮೂರನೇ ದಿವಸ ಅದರ ಬಗ್ಗೆ ಮೀಟಿಂಗ್‌ನಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕೆಂದರೆ, ಇದು ಸ್ವಲ್ಪ ಅನುಮಾನಕ್ಕೆ ಆಸ್ಪದ ಕೊಡುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ತಾವು ಕೇಳಿದ ವಿಷಯದ ಬಗ್ಗೆ ನಾನು ನೋಡುತ್ತೇನೆ. ಒಂದು ವೇಳೆ ಮಾನ್ಯ ಶಿವಕುಮಾರ್‌ರವರು ಹೇಳಿದಂತೆ, ಎಸ್‌ಎಸ್‌ಐ ಯೂನಿಟ್ ಸುಳ್ಳು ಸರ್ಟಿಫಿಕೇಟ್ ತಂದು ಕೊಟ್ಟ ಮಾರನೇ ದಿವಸವೇ ಕಮಿಟಿ ಮೀಟಿಂಗ್ ಮಾಡಿ, ಆ ಮೀಟಿಂಗ್‌ನಲ್ಲಿ ಐ.ಎ.ಎಸ್. ಅಧಿಕಾರಿಗಳೆಲ್ಲಾ ಸೇರಿಕೊಂಡು ಅವರಿಗೆ ಮಂಜೂರು ಮಾಡಬೇಕೆಂದು ರೆಕಮೆಂಡೇಷನ್ ಮಾಡಿದ್ದರೂ ಸಹಿತ the Hon'ble Chief Minister. being incharge of the Mines & Geology portfolio, has not sanctioned that. That is more important.

MR. SPEAKER: You are missing the point. The allegation, I am not prepared to extend this allegation to the Hon'ble Chief Minister who is the Leader of the House. What I say is, if this meeting has taken place on 1.1.98 and in the meeting if they have taken up this subject for consideration, the officers ought to be held responsible. They are all very senior officers of high rank. It is not a small thing. It reveals volumes and volumes. Let us not drag the Chief Minister here. The chief minister is innocent. I don't want to bring in his name.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ತಾವು ಮಾನ್ಯ ಮುಖ್ಯಮಂತ್ರಿಗಳಿಗೆ ತಕ್ಷಣ ಸರ್ಟಿಫಿಕೇಟ್ ಕೊಡುವುದಕ್ಕೆ ಹೋಗಬೇಡಿ. ಒಂದು ನಿಮಿಷ, ನಾನು ಹೇಳುತ್ತೇನೆ.

MR. SPEAKER: I am not trying to exonerate the Chief Minister. If you have further evidence with you, you place it. On hearing all of you, just know fresh information came from Mr. Shivakumar. ದಿನಾಂಕ 1.1.98 ಮೀಟಿಂಗ್ ಆಗಿದೆ. 30ನೇ ತಾರೀಖಿಗೆ ಸರ್ಟಿಫಿಕೇಟ್ ಬಂದಿದೆ ಎಂದು ಮಾನ್ಯ ಶಿವಕುಮಾರ್‌ರವರು ಹೇಳಿದರು. ಅದಕ್ಕೆ ಮಾತ್ರ I have sought clarification. If you have further information with you I am prepared to hear. I am not obliged to anybody.

SRI M.MALLIKARJUNA KHARGE: Sir, I would

like to read the proceedings of the 26th meeting of the Committee constituted under Rule-11 of KMM Rules 1994 held on 1.1.98.

"M/s. Sriranga Industries in the letter dated 15.6.91 informed that they don't have any SSI unit of 100% EOU in Karnataka. With this information, the file was placed before the 8th meeting of the Committee held on 24.6.95.

In the meantime, the forest department issued a preliminary notification on Novermber 1995 as the department intended to acquire the area in Survery No.49/1 of Sebinakatte Village, Kustagi Taluk to develop as a reserve forest.

Further, the Deputy Commissioner, Raichur District in his report dated 22.1.97 has stated that as the land in survey no.49/1 of Sebinakatte village has been reserved for Forest Department, it cannot be given for quarry lease. Then, as per the above D.C. report and preliminary notification of the Forest Department, all the 28 quarry lease applications were placed before the 22nd meeting of the Rule 11 Committee held on 14.5.97 and the Committee has recommended to the government for rejection of all the applicatioins filed in Survey No.49/1 of Sebinakatte village as per the rule 8(2) of KMM CR 1994."

4. 10 ಪಿ.ಎಂ

"The file of M/s.Sriranga Industries was placed before the 25th meeting of the committee held on 27.9.97 duly recommending for revocation of the earlier Notification and the Committee has recommended for the same. Now the Forest Settlement Officer, Bellary, in the proceedings

dated 5.12.97 recommended to the government to withdraw the notification No.FRE 626 FAF 91, Bangalore dated 6.11.95 and reinvesting this land with the department of Mines and Geology, Further, Sriranga Industries also in their letter dated 30.12.97 stated that they have a SSI Unit. ಮೊದಲ ಮೀಟಿಂಗ್‌ನಲ್ಲಿ ಈ ಇಂಡಸ್ಟ್ರೀ ಎಸ್.ಎಸ್.ಐ ಯೂನಿಟ್‌ನಲ್ಲಿ ಇಲ್ಲವೆಂದು ಹೇಳಿ ಇದರ ಪ್ರೊಸೀಡಿಂಗ್ಸ್‌ನಲ್ಲಿ ಬಂದಿದೆ.

Further, Sriranga Industries also in the letter dated 30.12.97 stated that they have a SSI unit and requested to consider the application in this favour. The copy of the SSI certificate has been produced. After considering all the facts and detailed discussion, the Committee resolved to recommend to the governnment for renewal of the quarry lease over an extent of 40 acres (I am sorry earlier I stated it as 62 acres) in respect of Survey No.49/1 of Sebinakatte, Village, Kustagi Taluk, Koppal District in favour of M/s. Sriranga Industries for a period of 10 years for pink granite as per the renewal." It is signed by the Chairman of the Committee, principal Secretary to Government, C&I Department. ಇದು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಆಗಿದ್ದುದು. ನೀವು ಉತ್ತರದಲ್ಲಿ ಏನು ಹೇಳಿದಿರಿ ಎಂದರೆ-ಇನ್ನೂ ಕನ್ಸಿಡರ್ ಮಾಡಿಲ್ಲ, ಸರ್ಕಾರ ನೋಡುತ್ತಾ ಇದೆ. ಎಂದು ಹೇಳಿದಿರಿ. ಈ ಪ್ರೊಸೀಡಿಂಗ್ಸ್‌ನಲ್ಲಿ ಶ್ರೀರಂಗ ಇಂಡಸ್ಟ್ರೀಯವರಿಗೆ ಕೊಡಬೇಕೆಂದು ಶಿಫಾರಸ್ಸು ಆಗಿರುವುದನ್ನಾದರೂ ನೀವು ಒಪ್ಪುತ್ತೀರಲ್ಲವೇ?

SRI P.G.R.SINDIA: It is not a notification.

SRI M.MALLIKARJUNA KHARGE: It is a proceeding.

SRI K.N.NAGE GOWDA: The Government decision is important, not proceedings.

(Interruptions)

SRI M.MALLIKARJUNA KHARGE: You get that entire file. Either you refer it to the House Committee or recommend for a CBI enquiry. The entire file, you refer it. I want to know when the concerned Section Officer has signed and when the concerned Deputy Secretary and Secretary have signed and when the Chief Minister has signed. Let us bring that file.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೇ 1-1-1998ರಲ್ಲಿ ಮೀಟಿಂಗ್ ಆಗಿರತಕ್ಕಂಥದ್ದು ನಿಜ. ಇಲ್ಲಿ ಪ್ರಶ್ನೆ ಅಡಕವಾಗಿರುವಂಥದ್ದು ಏನೆಂದರೆ-ಬಳ್ಳಾರಿ ಫಾರೆಸ್ಟ್ ಆಫೀಸರ್ ಅವರು ಅದು ಫಾರೆಸ್ಟ್ ಲ್ಯಾಂಡ್ ಆಗಿದ್ದು ಅದನ್ನು ಡಿ-ನೋಟಿಫೈ ಮಾಡಬಹುದೆಂದು ಏನು ಮಾಡಿದ್ದಾರೆ, ಆ ಅಧಿಕಾರಿಯ ವ್ಯಾಪ್ತಿ ಮೀರಿ ಕೆಲಸ ಮಾಡಿದ್ದಾರೋ ಅಥವಾ ಇಲ್ಲವೋ ಎನ್ನುವ ಬಗ್ಗೆ ವಿಚಾರಣೆಯನ್ನು ಮಾಡಬೇಕಾಗಿದೆ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಸದನಕ್ಕೆ ಮಿಸ್‌ಗೈಡ್ ಮಾಡುತ್ತಿದ್ದಾರೆ.

SRI P.G.R.SINDIA: I am not here to misguide. ನಾನು ಏಕೆ ಮಿಸ್‌ಗೈಡ್ ಮಾಡಲಿ?

MR. SPEAKER: Both of you should not misguide each other.

SRI P.G.R.SINDIA: It is only an issue. Sometimes on several, we may agree and on several issues we may disagree. But this is one of the issues where I don't agree. ಆದ್ದರಿಂದ 1-1-1998ರಲ್ಲಿ ಇದು ಮೀಟಿಂಗ್ ಆಗಿರತಕ್ಕಂಥದ್ದು ನಿಜ. ಇದರ ಜೊತೆಗೆ, 28 ಅರ್ಜಿಗಳು ಅಷ್ಟೇ ಅಲ್ಲ, ಮತ್ತು ಶ್ರೀರಂಗ ಇಂಡಸ್ಟ್ರೀಸ್‌ನ ಒಂದೇ ಅರ್ಜಿ ಮಾತ್ರ ಇದ್ದುದ್ದಲ್ಲ, ಅಧಿಕಾರಿಗಳು ಕೊಟ್ಟಿರತಕ್ಕಂಥ ಮಾಹಿತಿಗಳ ಪ್ರಕಾರವಾಗಿ 100 ಅರ್ಜಿಗಳು ಇದ್ದವು. ಇದರ ಡೀಟೈಲ್ಸ್‌ನ್ನು ತಮಗೆ ಆ ನಂತರ ಕಳುಹಿಸಿಕೊಡುತ್ತೇನೆ. ಕಮಿಟಿಯಲ್ಲಿ ಒಂದು ಮೀಟಿಂಗ್ ಆಯಿತು ಎಂದು ತಕ್ಷಣವೇ ಸರ್ಕಾರ ಇದನ್ನು ಆಜ್ಞೆ ಮಾಡಿ, ಸಂಬಂಧಪಟ್ಟ ಮಂತ್ರಿಗಳು ಅಥವಾ ಮುಖ್ಯಮಂತ್ರಿಗಳು ಆಜ್ಞೆಯನ್ನು ಹೊರಡಿಸಿದ್ದರೆ, ಸರ್ಕಾರ ಯಾವುದೋ ಕನ್ಸಿಡರೇಷನ್‌ಗೋಸ್ಕರ ಇದನ್ನು ಮಾಡುತ್ತಿದೆ ಎಂದು ನಾನು ಒಪ್ಪಿಕೊಳ್ಳುತ್ತಿದ್ದೆ. ಮಾನ್ಯ ಖರ್ಗೆಯವರು ಈ ವಿಚಾರವನ್ನು ಹೇಳಿದ್ದಾರೆ. ಅದು ಏನು ಹೇಳಿದ್ದಾರೆಂದರೆ,-ಅರಣ್ಯ

ಅಧಿಕಾರಿಗಳು ಮಾಡಿರತಕ್ಕಂಥದ್ದು ನಿಜವೇ? ಎಂದು. ಇದು ಫಾರೆಸ್ಟ್ ಲ್ಯಾಂಡ್ ಇದನ್ನು ಡಿ.ನೋಟಿಫೈ ಮಾಡಿರತಕ್ಕಂಥದ್ದು ಸರಿಯಲ್ಲವೆಂದು ಪ್ರೊಸೀಡಿಂಗ್ಸ್‌ನಲ್ಲಿ ಅಬ್ಜೆಕ್ಷನ್ ಮಾಡಿದ್ದಾರೆಂದು ಈಗತಾನೇ ನನಗೆ ಅರಣ್ಯ ಕಾರ್ಯದರ್ಶಿಗಳು ಹೇಳಿದ್ದಾರೆ.

MR. SPEAKER: At what stage?

SRI P.G.R.SINDIA: The Under Secretary who attended the meeting has objected for that. That is what the Principal Secratary is telling me. ಆದರಿಂದಾಗಿ ಇವರು ಹೇಳತಕ್ಕಂಥ ಕೈವಾಡಗಳು, ಕಾಣದ ಕೈಗಳು, ಅಥವಾ ಏನೋ ಒಂದು ದೊಡ್ಡ ಅವ್ಯವಹಾರ ಆಗಿದೆ ಎನ್ನುವ ರೀತಿಯಲ್ಲಿ ಹೇಳುವ ಅವಶ್ಯಕತೆ ಬರುವುದಿಲ್ಲ.

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು, ಸರ್ಕಾರ, ಮಂತ್ರಿಗಳು, ಆ ಹಂತಕ್ಕೆ ನಾನು ಹೋಗುತ್ತಿಲ್ಲ. ಬಳ್ಳಾರಿ ಆಫೀಸರ್ ಶಿಫಾರಸ್ಸು ಮಾಡಿ ಕಳುಹಿಸಿದ್ದು ಆದಮೇಲೆ ರೂಲ್ಸ್-11ರ ಕಮೀಟಿ ಮೀಟಿಂಗ್ ಅಜೆಂಡಾದಲ್ಲಿ ಸಬ್ಜೆಕ್ಟ್ ಇಡುತ್ತಾರಲ್ಲವೇ; ಆ ಕಮಿಟಿ ಮೀಟಿಂಗ್‌ನಲ್ಲಿ ಸಬ್ಜೆಕ್ಟ್‌ಗೆ ಇಡುವುದಕ್ಕೆ ಯಾವುದು ಯೋಗ್ಯವಾದ ವಿಷಯ ಯಾವುದು ಯೋಗ್ಯವಾದುದು ಅಲ್ಲ ಎನ್ನತಕ್ಕಂಥ ಒಂದು ತಿಳುವಳಿಕೆ ಸರ್ಕಾರಿ ನೌಕರರಾಗಿರತಕ್ಕಂಥವರಿಗೆ ಇರುವುದಿಲ್ಲವೇ? ಒಬ್ಬ ಅಧಿಕಾರಿ ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿ ಮಾಡಿ ಕಳುಹಿಸಿದ್ದನ್ನು ತರಾತುರಿಯಿಂದ ಸಬ್ಜೆಕ್ಟ್ ಆಗಿ ಕಮಿಟಿಗೆ ತರುತ್ತಾರೆ, ಕಮಿಟಿಯಲ್ಲಿ ಆಫೀಸರುಗಳೆಲ್ಲಾ ಕುಳಿತು ಚರ್ಚೆ ಮಾಡುತ್ತಾರೆಂದರೆ I am not trying to implead Minister or the Chief Minister or anybody into this. ಅಧಿಕಾರಿಗಳು ತನ್ನ ವ್ಯಾಪ್ತಿಯನ್ನು ಮೀರಿ ಎಷ್ಟು ದೂರ ಹೋಗುತ್ತಾರೆಂದು ಆಶ್ಚರ್ಯವಾಗುತ್ತಿದೆ. ತನ್ನ ವ್ಯಾಪ್ತಿಯನ್ನು ಮೀರಿ ಹೋಗುವುದಕ್ಕೆ ಇವರಿಗೆ ಎಷ್ಟು ಧೈರ್ಯ? ಎಷ್ಟು ಗುಂಡಿಗೆ ಇವರಿಗೆ? ಈ ಮಹಾ ಅಧಿಕಾರಿಗಳು ನಮ್ಮನ್ನು ಜನರ ಎದುರಿಗೆ ಎಷ್ಟು ಭ್ರಷ್ಟರನ್ನಾಗಿ ತೋರಿಸಲಿಕ್ಕೆ ಪ್ರಯತ್ನಪಡುತ್ತಾರೆ? ಇವರು ನಮ್ಮನ್ನೆಲ್ಲ ಎಷ್ಟು ಕೆಟ್ಟದಾಗಿ ಜನರ ಎದುರಿಗೆ ತೋರಿಸುತ್ತಾರೆ? ಈ ಅಧಿಕಾರಿಗಳ ಪ್ರಾಮಾಣಿಕತನ ಎಲ್ಲರಿಗೂ ಸ್ವಲ್ಪ ಗೊತ್ತಾಗಲಿ. ಈ ವಿಷಯವನ್ನು ಆ ರೂಲ್-11ರ ಕಮಿಟಿಯಲ್ಲಿ ಸಬ್ಜೆಕ್ಟ್ ಆಗಿ ಇಟ್ಟುಕೊಂಡರಾದರೂ ಹೇಗೆ? ಅವರಿಗೆ ಎಲ್ಲಿಂದ ಬಂತು ಈ ಧೈರ್ಯ? ಈ ಸಬ್ಜೆಕ್ಟ್‌ನ್ನು ಇಟ್ಟ ಗುಮಾಸ್ತನಿಗೆ ತರಬೇತಿ ಇರಲಿಲ್ಲವೇ? ಆ ಆಫೀಸರ್‌ಗೆ ಗೊತ್ತಿರಲಿಲ್ಲವೇ? I know for certain that whatever has been read out by them is the Proceedings of the meeting. Proceeding of the meeting is not the Notification. I am certain about it. That is why there is no stigma attached to the Government. But can those

officers arrogate so much authority to themselves? Have they not crossed their limits? Does it not reveal something which is fussy Prima facie Let us first understand that we are all citizens of the State and that we have a responsibility/duty to protect the treasury of the State.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಇದರಲ್ಲಿ ಅಧಿಕಾರಿಗಳು ಅಲ್ಲ, ಸರ್ಕಾರವೇ ಇದರಲ್ಲಿ ಶಾಮೀಲಾಗಿದೆ. ಸರ್ಕಾರವನ್ನು ನಡೆಸತಕ್ಕಂಥವರು ಅಧಿಕಾರಿಗಳ ಕೈಹಿಡಿದು ಏನು ಬೇಕೋ ಅದನ್ನು ಭರಿಸುತ್ತಾ ಇದ್ದಾರೆ. ಇದನ್ನು ನಾನು ನೇರವಾಗಿ ಆರೋಪ ಮಾಡುತ್ತೇನೆ. ಈ ಇಲಾಖೆಯ ಬಗ್ಗೆ ಅನೇಕ ಬಾರಿ ಚರ್ಚೆ ಮಾಡಿದ್ದೇವೆ. ಗ್ರಾನೈಟ್ ಅವ್ಯವಹಾರದ ಬಗ್ಗೆ ಸದನಸಮಿತಿ ಮಾಡಿದ್ದೇವೆ. ಲೂಟಿ ಮಾಡುವುದರಲ್ಲಿ ಇವರು ಶಾಮೀಲಾಗುತ್ತಿದ್ದಾರೆ. ಸಿ.ಬಿ.ಐ.ಯವರಿಂದ ತನಿಖೆ ಮಾಡಿಸಿದರೆ ಇವರ ಎಲ್ಲಾ ಅವ್ಯವಹಾರ ಬಯಲಾಗುತ್ತದೆಂದು ಇವರು ಇದನ್ನು ಮಾಡುತ್ತಿಲ್ಲ. ಇವರು ಒತ್ತಡ ತರದಿದ್ದರೆ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುತ್ತಾರೆ. ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡುವುದಕ್ಕೆ ಇವರು ಬಿಡುತ್ತಿಲ್ಲ. ಅಧಿಕಾರಿಗಳಿಗೆ ಎಲ್ಲಾ ತರಹದ ಒತ್ತಡವನ್ನು ತಂದು, ಮಾಡಬಾರದ ಕೆಲಸವನ್ನು ಮಾಡಿಸುವಂಥ ಒಂದು ಸರ್ಕಾರ ಅಲ್ಲಿ ಕುಳಿತಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೇ, ಒಂದು ವಿಷಯವನ್ನು ಮಾನ್ಯ ಯಡಿಯೂರಪ್ಪನವರು ಅರ್ಥ ಮಾಡಿಕೊಳ್ಳಬೇಕು. 1-1-1998ರಲ್ಲಿ ಮೀಟಿಂಗ್ ಆಗಿರುವಂಥದ್ದು. ಇವತ್ತು ನಾವು ಮಾರ್ಚ್ ತಿಂಗಳಿನಲ್ಲಿ ಇದ್ದೇವೆ. ಇದು ಕೇವಲ ಪ್ರೋಸೀಡಿಂಗ್ಸ್ ಆಗಿರುವುದರಿಂದ ಸರ್ಕಾರ ಇದಕ್ಕೆ ಆಜ್ಞೆ ಮಾಡಲಿಲ್ಲ.

(ಗೊಂದಲ)

SRI M.MALLIKARJUNA KHARGE:(Leader of the Opposition): Based on the Proceedings, the file has been built up. ಆ ಪ್ರೊಸಿಡಿಂಗ್ಸ್ ಪೇಪರ್ಸ್ ಮೇಲೆ ಫೈಲ್ ಬಿಲ್ಟ್ ಅಪ್ ಮಾಡಿ ರುಜು ಆಗಿ ಇದು ಇಶ್ಯೂ ಆಗುವುದರಲ್ಲಿ ಇತ್ತು.

SRI P.G.R.SINDIA: We have not issued any government order.

(Interruptions)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಫೈಲ್ ಅವರ ಹತ್ತಿರ ಇಟ್ಟುಕೊಂಡು ಆ ಫೈಲ್ ತೋರಿಸಿ ಎಂದು ಕೇಳಿದರೆ ಹೇಗೆ?

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ಸರ್ಕಾರಿ ಆದೇಶವನ್ನು ನೀವೇ ಮಾಡಿದ್ದೀರೆಂದು ಮಾನ್ಯ ಖರ್ಗೆಯವರು ಹೇಳುತ್ತಿದ್ದಾರೆ. The Government Order has not been issued. The land has not been given. ಈ ಪ್ರೊಸೀಡಿಂಗ್ಸ್‌ನ್ನು ನೋಡಿ ಇದರ ಮೇಲೆ ನೀವು ಏನೇನೋ ಹೇಳಿದರೆ ಹೇಗೆ?

(ಗೊಂದಲ)

SRI T.B.JAYACHANDRA: Sir, under Section 8(A) there is a restriction. "Availability of land belonging to the State Government to be notified for grant." The section says:

"No area belonging to the State Government which is previously held or being held under quarrying lease granted in respect of which it lapsed under Rule 6 and in respect of which notifications have been issued under rule 3 of Rule 8 shall be available for grant unless the availability of that area for grant is notified in the official gazette and specifying the date." ಮಾನ್ಯ ಅಧ್ಯಕ್ಷರೆ, ನಮ್ಮ ಕಾನೂನುಗಳನ್ನು ಗಾಳಿಗೆ ತೂರಿರುತ್ತಾರೆ ಎನ್ನುವುದಕ್ಕೆ ಇನ್ನೊಂದು ಹೇಳಿಬಿಡುತ್ತೇನೆ.

ಅಧ್ಯಕ್ಷರು: ನೀವು ಕ್ಲಿಯರ್ ಆಗಿ ಹೇಳಬೇಕು. ಅಡ್‌ಮಿನಿಸ್ಟ್ರೇಷನ್ ಎಂದರೆ, ಗೌರ್ನಮೆಂಟ್ ಎಂದರೆ... Political Executive is different. Bureaucratic Executive is different. Here, ನನ್ನ ಪ್ರಕಾರವಾಗಿ by hearing and seeing the papers, it is the Bureaucratic Executive that is erred or Political Executive ತಪ್ಪು ಮಾಡಿದ್ದಾರೆ ಎನ್ನುವುದಕ್ಕೆ ನಿಮ್ಮ ಹತ್ತಿರ ಎವಿಡೆನ್ಸ್ ಇದ್ದರೆ ಕೊಡಿ. You try to continue on that. Let them say whatever they want.

SRI P.G.R.SINDIA: Mr. SPeaker, Hon'ble Leader of the Opposition, Hon'ble Members of this House, we will find-out and punish such of those officers who have

exceeded their limits.

(INTERRUPTIONS)

(ಈ ಹಂತದಲ್ಲಿ ಡಿ.ಕೆ.ಶಿವಕುಮಾರ್‌ರವರು ಸದನದ ಬಾವಿಗೆ ಬಂದರು)

ಅಧ್ಯಕ್ಷರು: ಮಾನ್ಯ ಸಿಂಧ್ಯರವರೆ ಅದು ಗೊತ್ತಾಗಬೇಕು. ನಾನು ಏನು ಹೇಳುತ್ತೇನೆಂದರೆ ಎಷ್ಟು ಅಪಪ್ರಚಾರಗಳು ಬಂದಿವೆ, ಎಷ್ಟೆಷ್ಟು ಪತ್ರಿಕೆಗಳು ನಿಮ್ಮ ಬಗ್ಗೆ ಎಷ್ಟೆಷ್ಟು ಹೀನವಾಗಿ ಬರೆದಿದೆ ಎನ್ನುವುದು ಗೊತ್ತಿದೆ. ನೀವು, ನಿಮ್ಮ ಮನೆಯವರು, ನಿಮ್ಮ ಮಕ್ಕಳು ಎಷ್ಟು ಸಫರ್ ಆಗಿರುತ್ತೀರಿ ಎನ್ನುವುದು ಗೊತ್ತಿದೆ. The same thing has happened to me. ಇವರು ಮಾತ್ರ ದೊಡ್ಡ ಮನುಷ್ಯರುಗಳು ಎಲ್ಲವನ್ನೂ ಮಾಡಿಬಿಟ್ಟು ಇಷ್ಟು ಮಾಡಿಬಿಟ್ಟು ಮನೆಗಳಲ್ಲಿ ಕುಳಿತುಕೊಳ್ಳುತ್ತಾರಲ್ಲಾ ಇವರ ಹೆಸರುಗಳಾದರೂ ಜನರಿಗೆ ಗೊತ್ತಾಗಲಿ ಇವರು ಯಾರು ದೊಡ್ಡಮನುಷ್ಯರು ಎಂದು. ಅವರ ಹೆಂಡತಿಯ ಮಕ್ಕಳಿಗೂ ಕೂಡ ಈ ನೋವು ಗೊತ್ತಾಗಲಿ. ನಮ್ಮ ಮಕ್ಕಳು ಶಾಲೆಗೆ ಹೋದರೆ ಇಂಥವರ ಮಕ್ಕಳು ಎಂದು ಹೇಳಿಕೊಂಡು ಹೆದರಿ ಬದುಕುವಂತಹ ಕಾಲ ಬಂದಿದೆ. ನಾವು ಒಂದು ಸೋಷಿಯಲ್ ಫಂಕ್ಷನ್‌ಗೆ ಹೋಗಬೇಕಾದರೆ ರಾಜಕಾರಣಿಗಳಾದ ನಾವು ತಲೆಯನ್ನು ಪಕ್ಕಕ್ಕೆ ಇಟ್ಟುಕೊಂಡು ಹೋಗಬೇಕಾದಂತಹ ಪರಿಸ್ಥಿತಿಯು ಬಂದಿದೆ. ಯಾರು ಅಧಿಕಾರಿಗಳು ಮಾಡಿದ್ದಾರೆ ಅವರ ಹೆಸರು ಅವರ ಜಾತಕ ಈಚೆಗೆ ಬರಲಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಇವರು ಒತ್ತಡವನ್ನು ತಂದು ಅಧಿಕಾರಿಗಳ ಕೈಯಲ್ಲಿ ಮಾಡಬಾರದ್ದನ್ನು ಮಾಡಿಸುತ್ತಿದ್ದಾರೆ. ಜನ ಛೀಮಾರಿಯಾಕಬೇಕಾಗಿರುವುದು ಈ ಸರ್ಕಾರಕ್ಕೆ. ಅಧಿಕಾರಿಗಳು ಅವರು ಹೇಳಿದ ಹಾಗೆ ಕೇಳದಿದ್ದರೆ ಅಲ್ಲಿ ಕುಳಿತುಕೊಳ್ಳುವುದಕ್ಕೆ ಆಗದಂತಹ ದುಸ್ಥಿತಿಗೆ ಬಂದು ಬಿಟ್ಟಿದ್ದಾರೆ.

MR. SPEAKER: Why these people are in the well? I didn't see.

(ಗೊಂದಲ)

(ಹಂತದಲ್ಲಿ ಶ್ರೀ ಮುದ್ದಹನುಮೇಗೌಡ ಹಾಗೂ ಶ್ರೀ ನಾರಾಯಣ್‌ರವರು ಸದನದ ಬಾವಿಗೆ ಬಂದರು)

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ ಒಂದು ಎಂಡಾರ್ಸ್‌ಮೆಂಟ್ ಹೋಗುತ್ತದೆ. ಸರ್ಕಾರದ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಬೆಂಗಳೂರು ದಿನಾಂಕ 26.9.1997ಕ್ಕೆ ಬೇರೆ ಹೋಗುತ್ತದೆ.

ಯಾರಿಗೆ ಎಂದರೆ ಮೆ: ಐಶ್ವರ್ಯ ಬ್ಲಾಕ್ಸ್, ಸ್ಟೋ ಅಂಡ್ ಸ್ಟೋ ಅಡ್ರೆಸ್. ಅದಕ್ಕೆ ಉಲ್ಲೇಖ ನಿಮ್ಮ ದಿನಾಂಕ 24.7.1996 ಕಲ್ಲು ಗಣಿ ಗುತ್ತಿಗೆ ಪರ ಉಲ್ಲೇಖ ಮಾಡಿ ಅರ್ಜಿಯಲ್ಲಿ ತೋರಿಸಿರುವಂತಹ ಪ್ರದೇಶ ಅರಣ್ಯ ಪ್ರದೇಶಕ್ಕಾಗಿ ಮೀಸಲಾಗಿಟ್ಟಿರುವುದರಿಂದ ಈ ಮೇಲಿನ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸಮಿತಿಯ ಶಿಫಾರಸ್ಸಿನ ಪ್ರಕಾರ ಉಲ್ಲೇಖ ಅರ್ಜಿಯನ್ನು ತಿರಸ್ಕರಿಸಲು ತೀರ್ಮಾನಿಸಿದೆ ಐಶ್ವರ್ಯ ಬ್ಲಾಕ್‌ನವರಿಗೆ ರಿಜೆಕ್ಟ್ ಮಾಡುತ್ತಾರೆ. ಆಟೋಮೆಟಿಕ್ ಆಗಿ ಸೇಚ್ಛೆಯಾಗಿ ಒಬ್ಬರೇ ಅದನ್ನೇ ಸಮಿತಿಯು ಮುಂದೆ ಇಡುತ್ತಾರೆಂದರೆ ಅದು ಏನಾಗುತ್ತದೆಂದು ಹೇಳಿ.

MR. SPEAKER: Mr. Kharge, we will have to find some solutions, because we have to take-up the remaining business.

ಶ್ರೀ ಬಿ.ಎಸ್.ಯಡಿಯೂರಪ್ಪ: ಅವರು ಕೊಟ್ಟಿರುವಂತಹ ಉತ್ತರದಲ್ಲಿ ಹಿಂದಿನ ಅಧಿಸೂಚನೆಯನ್ನು ಮಾರ್ಪಡಿಸಿ 10 ಎಕರೆಗೆ ಬದಲಾಗಿ 40 ಎಕರೆಯನ್ನು, 5 ವರ್ಷಕ್ಕೆ ಬದಲಾಗಿ 40 ವರ್ಷಗಳಿಗೆ ಮಂಜೂರು ಮಾಡಲು ಕೋರಿಕೆಯನ್ನು ಸಲ್ಲಿಸಿದ್ದು ಸದರಿ ಅರ್ಜಿಯು ಸರ್ಕಾರದ ಪರಿಶೀಲನೆಯಲ್ಲಿದೆ. ಅಂದರೆ ಕಾನೂನು ಬಾಹಿರವಾಗಿ ಇದೆಲ್ಲಾ ನಡೆದುಕೊಂಡು ಬಂದಮೇಲೂ, ನೀವು ಇಲ್ಲಿಗೆ ಬರುವುದಕ್ಕೆ ಮುಂಚೆ ಈ ಸದನದ ಮುಂದೆ ನಾಲ್ಕು ಮುಕ್ಕಾಲು ಕೋಟಿ ಜನ ಪ್ರತಿನಿಧಿಗಳು ಕುಳಿತಿರುವಾಗ ಪ್ರಸ್ತಾಪವನ್ನು ಮಾಡಿದ ಮೇಲಾದರೂ ಇಂಥಿಂಥ ವ್ಯವಸ್ಥೆಯಾಗಿದೆ, ತಪ್ಪಾಗಿದೆ. ಇವರ ಮೇಲೆ ಕ್ರಮವನ್ನು ತೆಗೆದುಕೊಳ್ಳುವವರು ಇದ್ದೇವೆ. ಇದನ್ನು ರದ್ದು ಮಾಡುತ್ತೇವೆಂದು ಹೇಳಿದರಾ? ಮಂಜೂರಾತಿಗಾಗಿ ಪರಿಶಿಲನೆಯಲ್ಲಿದೆ ಎಂದರೆ ಏನು? ಮಾನ್ಯ ಅಧ್ಯಕ್ಷರೆ ಇದೊಂದು ಸ್ಯಾಂಪಲ್ ಅಷ್ಟೆ. ಖನಿಜ ಸಂಪತ್ತನ್ನು ಲೂಟಿಯನ್ನು ಮಾಡಿಕೊಂಡು ಬರುವಂತಹ ಕೆಲಸವನ್ನು ಕಳೆದ ಮೂರು ವರ್ಷಗಳಿಂದ ಮಾಡಿಕೊಂಡು ಬರುತ್ತಿದ್ದೀರಿ ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಅದಕ್ಕಾಗಿ ಸದನ ಸಮಿತಿಯನ್ನು ಮಾಡಿಮೋ. ಇಷ್ಟಾದರೂ ಸಹ ಜೆಮ್ಸ್ ಗ್ರಾನೈಟ್‌ದ್ದು ಉದಾಹರಣೆ ಇದೆಯಲ್ಲಾ. ಸುಪ್ರೀಂ ಕೋರ್ಟ್‌ನಲ್ಲಿ ರಿಜೆಕ್ಟ್ ಮಾಡಿದರೆ ನೀವು ಮತ್ತೆ ಅವನಿಗೆ ಗುತ್ತಿಗೆ ಕೊಡಲಿಲ್ಲವೇನು? ಈ ಕೆಲಸ ನಿರಂತರವಾಗಿ ಮುಂದುವರೆದಿದೆ. ದಯಮಾಡಿ ಇದನ್ನು ಸಿ.ಬಿ.ಐಗೆ ರೆಫರ್ ಮಾಡಿ. ಇದರಿಂದ ಅನೇಕ ಕೇಸ್‌ಗಳು, ಅನೇಕ ಫೈಲ್‌ಗಳು ಈಚೆಗೆ ಬರುತ್ತದೆ. ಸುಮ್ಮನೆ ಅಧಿಕಾರಗಳ ಬಗ್ಗೆ ಏಕೆ ನಾವು ಹೇಳಬೇಕು? ಅಧಿಕಾರಿಗಳ ಕೈಯಿಂದ ಮಾಡಿಸುವವರು ಇವರು. ಮೊದಲು ಇವರ ಸರಿಯಾದಂತಹ ಬಣ್ಣ ಬಯಲು ಆಗಲಿ. ಅದಕ್ಕಾಗಿ ಫೈಲ್‌ನ್ನು ಇಡಲಿ, ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಸದನಕ್ಕೆ ಕರೆಸಿ. 10 ನಿಮಿಷಗಳ ಕಾಲ ಸದನವನ್ನು ಮುಂದೂಡಿ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಅವರ ಹೇಳಿಕೆಯಲ್ಲಿ ಅರ್ಜಿಯು

ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಈ ರೂಲ್ 8(2) ಪ್ರಕಾರ:

"No quarry lease shall be granted in any forest land: provided that a lease in such land may be granted by the State Government in favour of any undertaking owned by the Central Government or State Government." Admittedly, this is the policy. Based on that, this application should have been rejected by the Committee itself. ನೀವು ಹೇಳಿರುವ ಪ್ರಕಾರ ಇದು ಪರಿಶೀಲನೆಯಲ್ಲಿದೆ ಎಂದು ಹೇಳಿದರೆ ಅರ್ಥ ಏನು?

SRI P.G.R.SINDIA: It is before the Government. We have not given that.

SRI KAGODU THIMMAPPA: Straight away you could have rejected the application.

SRI P.G.R.SINDIA: No, we have not given that. It is only a statement that the Minister has made.

(INTERRUPTIONS)

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಅರ್ಧ ಎಕರೆ ಅರಣ್ಯ ಪ್ರದೇಶದಲ್ಲಿ ಬಗರ್ ಹುಕುಂ ಮಾಡಿದರೆ ಬಿಡುವುದಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು, ಗಣಿ ಮತ್ತು ಭೂ ವಿಜ್ಞಾನ ಸಚಿವರು): ಮಾನ್ಯ ಅಧ್ಯಕ್ಷರೆ, ಗೌರ್ನಮೆಂಟ್ ಇದನ್ನು ಗ್ರಾಂಟ್ ಮಾಡಿಲ್ಲ. ಗ್ರಾಂಟ್ ಮಾಡುವುದಕ್ಕಿಂತಲೂ ಮುಂಚೆಯೇ ಇವರು ಎಲ್ಲಾ ರೀತಿಯ ಊಹೆಗಳನ್ನು ಮಾಡಿಕೊಳ್ಳುತ್ತಾ ಕುಳಿತುಕೊಳ್ಳುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಅಧ್ಯಕ್ಷರೆ, ಸರ್ಕಾರದ ಪರಿಶೀಲನೆಯಲ್ಲಿದೆ ಎಂದರೆ ನೀವು ಆ ರೂಲ್‌ನ್ನು ವೈಲೇಟ್ ಮಾಡುತ್ತಿದ್ದೀರಲ್ಲಾ. By a simple reading of the rule, you could have rejected the application.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ನಾವು ನೋಡದೇ ಇದ್ದರೆ ಅದನ್ನು ಕೊಟ್ಟು ಬಿಡುತ್ತಿದ್ದೊ, ಅದನ್ನೆಲ್ಲಾ ನಾವು ನೋಡಬೇಕಲ್ಲಾ. ನಾವು ಪ್ರೊಸೀಡಿಂಗ್

ಸರಿಯಾಗಿದೆಯಾ? ಆ ಆಫೀಸರ್ ಕಳುಹಿಸಿರುವಂಥದ್ದು ಸರಿಯಾಗಿದೆಯಾ? ಅದನ್ನೆಲ್ಲಾ ನೋಡಬೇಕಲ್ಲಾ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ): ಮಾನ್ಯ ಅಧ್ಯಕ್ಷರೆ, ಯಾವ್ಯಾವ ಅಧಿಕಾರಿಗಳು ತಪ್ಪು ಮಾಡಿದ್ದಾರೆಂದು ತನಿಖೆಯಾಗಬೇಕೆಂದು ಇದೆಯೋ ಹಾಗೆಯೇ ಇದರ ಹಿಂದೆ ಇರುವಂತಹ ರಾಜಕೀಯ ಶಕ್ತಿಗಳು ಯಾವ್ಯಾವುದು, ಯಾವ್ಯಾವ ವ್ಯಕ್ತಿಗಳು ಎನ್ನುವುದು ಸಹ ತನಿಖೆಯಿಂದ ಹೊರಗೆ ಬರಬೇಕು. ಆದುದರಿಂದ ಸಿ.ಬಿ.ಐ. ತನಿಖೆಯಾಗಲೇಬೇಕು. ಇಷ್ಟೊಂದು ಗಂಭೀರವಾದಂತಹ ವಿಷಯ ಪ್ರಸ್ತಾಪವಾದಾಗ ಇದರ ಹಿಂದೆ ಇರತಕ್ಕಂತಹ ವ್ಯಕ್ತಿಗಳು ಯಾರ‍್ಯಾರು ಎನ್ನುವುದು ಸಹ ಬಯಲು ಆಗಬೇಕಲ್ಲಾ.

ಅಧ್ಯಕ್ಷರು: ಸಮಯ ಹೋಗಿ ಬಿಡುತ್ತದೆ. ಏನಾದರೂ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಿಮ್ಮ ಕೊಠಡಿಯಲ್ಲಿ ಕುಳಿತುಕೊಂಡು ಚರ್ಚೆಯನ್ನು ಮಾಡುವಂಥದ್ದು ಸರಿಯಾದುದು ಅಲ್ಲ.

ಅಧ್ಯಕ್ಷರು: ನಾನು ಹೇಳಿದ್ದನ್ನು ನೀವು ಕೇಳಿಸಿಕೊಳ್ಳಲಿಲ್ಲ. ನಾನು ಏನು ಹೇಳಿದೆನೆಂದರೆ ಸಮಯ ಮುಂದೆ ಹೋಗುತ್ತಿದೆ ಏನಾದರೂ ಇದಕ್ಕೆ ಒಂದು ಸಲ್ಯೂಷನ್ ಕಂಡುಹಿಡಿಯಿರಿ ಎಂದು ಹೇಳಿದೆ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಪ್ರೊಸೀಡಿಂಗ್ಸ್‌ನಲ್ಲಿ ರೆಕ್ಮೆಂಡ್ ಆಗುತ್ತದೆ. ಪ್ರೊಸಿಡಿಂಗ್ಸ್ ಜಿ.ಓ ಅಲ್ಲ ಎನ್ನುವುದು ಎಲ್ಲರಿಗೂ ಸಹ ಗೊತ್ತು. ಆದರೆ ಆ ಪ್ರೊಸೀಡಿಂಗ್ಸ್‌ನಲ್ಲಿ ರೆಕಮೆಂಡ್ ಆಗಿ ಬಂದ ಮೇಲೆ ಪ್ರೋಸೆಸಿಂಗ್ ಸ್ಟಾರ್ಟ್ ಆಗುತ್ತದೆ. Instead of rejecting as per the Act, you are examining it.

(INTERRUPTIONS)

SRI P.G.R.SINDIA: Whether it is legal or illegal, whether rightly or wrongly, as per the Act ಅದನ್ನು ಎಗ್ಸಾಮಿನ್ ಮಾಡಬಾರದೆಂದು ಅಲ್ಲಿ ಎಲ್ಲಿದೆ?

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಇಲ್ಲೀಗಲ್ ಆಗಿರುವಂಥದ್ದನ್ನು ರೆಕಮೆಂಡ್ ಮಾಡಿರತಕ್ಕಂತ ಅಧಿಕಾರಿ ಯಾವನು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸ್ಟ್ರೈಟ್ ಅವೇ ರೂಲ್ಸ್‌ನಲ್ಲಿಯೇ ಎಂಟರ್‌ಟೈನ್ ಮಾಡುವುದಕ್ಕೆ ಅವಕಾಶ ಇಲ್ಲದೇ ಇರುವಾಗ, how the Committee has recommended? How you are examining it? That is important.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, per se, if there is any illegality. ಈಗ ಅವರು ಹೇಳಿದ್ದು ಅದು ಪರಿಶೀಲನೆಯಲ್ಲಿದೆ ಎಂದು. ಇಲ್ಲೀಗಲ್ ಇದ್ದರೆ ನಾವು ಅದನ್ನು ರಿಜೆಕ್ಟ್ ಮಾಡುತ್ತೇವೆಂದು ಅರ್ಥ. ದಯಮಾಡಿ ಸ್ವಲ್ಪ ಅವರು ಕಳುಹಿಸಿಕೊಟ್ಟಿರುವಂಥದ್ದು ಸರಿಯಾದುದ್ದೋ, ಸರಿಯಾದುದು ಅಲ್ಲವೋ, ಕಾನೂನಿನ ಪ್ರಕಾರವಾಗಿದೆಯೋ, ಕಾನೂನು ಬಾಹಿರವಾಗಿದೆಯೋ, ಸರಿಯಾಗಿ ಕಾನೂನಿನ ಪ್ರಕಾರವಾಗಿ ಪ್ರೊಸೀಡಿಂಗ್ಸ್ ಆಗಿದೆಯೋ ಇಲ್ಲವೋ ಏನು ಎನ್ನುವುದನ್ನು ನೋಡಿ ನಾವು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಸೆಕ್ಷನ್ 8(2) ಏನು ಹೇಳುತ್ತದೆಂದರೆ "No quarrying lease shall be granted on any forest land;

Provided that a lease in such a land may be granted by the State Government.

(INTERRUPTIONS)

ಯಾವ ಸಂದರ್ಭದಲ್ಲಿ ಕೊಡಬಹುದೆಂದರೆ, "If it is an undertaking owned by the State Government or the Central Government, after obtaining a prior approval of the Forest Conservation Act, 1980." ಎಂಬ ಒಂದು ಮಾತನ್ನು ಹೇಳಿದ್ದಾರೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಕೊಡುವುದಿಲ್ಲ. ಸರ್ಕಾರ ಯಾವುದೇ ಸರ್ಕಾರಿ ಆಜ್ಞೆಯನ್ನು ಮಾಡಿಲ್ಲ. ಯಾವುದೇ ಅಧಿಕಾರಿಗಳ ಮೇಲೆ ಸಿ.ಬಿ.ಐ. ತನಿಖೆ ಮಾಡಬೇಕೆಂದು we have not made any order. ಬೇಕಾದಷ್ಟು ಪ್ರೊಸೀಡಿಂಗ್ಸ್ ಆಗುತ್ತದೆ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, The Director of Mines and Geology is the Member Secretary. ಅವರ ಕರ್ತವ್ಯಗಳು ಏನು?

under the Act? "The Director shall on receipt of the applications under Rule 9, scruitinise all such applications and submit with his remarks to the committee. On receipt of applications from the Director, the Committee having regard to the priorities under Rule 12 and the guidelines issued by the State Government, if any, consider such applications and make recommendation to the Government." ಈ ಪ್ರೊಸೀಜರ್ ಇದ್ದಾಗಲೂ ಸಹಿತ ಇವತ್ತು ಪ್ರೊಸೀಡಿಂಗ್ಸ್ ಮಾಡಿ ಎಂದು ಶಿಫಾರಸ್ಸು ಮಾಡಿದ್ದೇವೆಂದು ಹೇಳಿದರೆ ನಿಮ್ಮ ಅಧಿಕಾರಿಗಳು ಯಾವ ಪ್ರಭಾವದಲ್ಲಿ ಕೆಲಸ ಮಾಡಿದರು, ಯಾರ ಪ್ರಭಾವದಲ್ಲಿದ್ದರು, ಅದರ ಹಿಂದಿದ್ದ ಕೈಗಳು ಯಾವುವು ಎಂಬುದನ್ನು ದಯವಿಟ್ಟು ಹೇಳಿ. ಕಮಿಟಿಯಲ್ಲಿರತಕ್ಕದ್ದು ಯಾರು ಎಂದರೆ the Chairman is the Industries Secretary, and the Secretary to the Government, Finance Department is the Member. ಇಲ್ಲಿ ಅವರ ಪರವಾಗಿ ಬೇರೆ ಯಾರೂ ಹೋಗುವ ಹಾಗೆ ಇಲ್ಲ. ಅವರೇ ಇರಬೇಕಾಗುತ್ತದೆ. That is the highest body. ಇವತ್ತು ಅವರು ಕೊಡತಕ್ಕ ಶಿಫಾರಸ್ಸನ್ನು ಸರ್ವೇಸಾಮಾನ್ಯವಾಗಿ ಯಾರೂ ತಿರಸ್ಕಾರ ಮಾಡುವುದಕ್ಕಾಗುವುದಿಲ್ಲ. ಅಂಥ ಒಂದು ಅತ್ಯುನ್ನತ ಮಟ್ಟದ ಸಮಿತಿಯನ್ನು ರಚನೆ ಮಾಡಿರತಕ್ಕದ್ದು.

MR. SPEAKER: Mr. Sindhia has got some information.

ಶ್ರೀ ಟಿ.ಬಿ.ಜಯಚಂದ್ರ: ಈ ರೂಲ್ಸ್ ಮಾಡಬೇಕಾದರೆ ನಾನೂ ಕೂಡ ಕಮಿಟಿಯಲ್ಲಿದ್ದೆ, ಮಾನ್ಯ ಸಿಂಧ್ಯರವರು ಇದ್ದರು. ನಾವು ಇದನ್ನು ಶಿಫಾರಸ್ಸು ಮಾಡಿರತಕ್ಕದ್ದು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಇಷ್ಟೆಲ್ಲಾ ಚರ್ಚೆಯಾಗುತ್ತಾ ಇರತಕ್ಕದ್ದು ಅಧಿಕಾರಿಗಳು ಮಾಡಿರತಕ್ಕ ಒಂದು ಮೀಟಿಂಗ್ ಪ್ರೊಸೀಡಿಂಗ್ಸ್ ಮೇಲೆ. ಸಮ್ ಅಂಡ್ ಸಬ್‌ಸ್ಟೆನ್ಸ್ ಏನಿದೆ, ಬಳ್ಳಾರಿಯಲ್ಲಿರತಕ್ಕ ಅರಣ್ಯಾಧಿಕಾರಿ ಡೀನೋಟಿಫೈ ಮಾಡಿರುವುದಕ್ಕೆ ಅದನ್ನು ರೆಕಮೆಂಡ್ ಮಾಡಿರತಕ್ಕದ್ದು, ಇದು ಸರಿಯೇ ಅಥವ ತಪ್ಪೇ ಅವರ ಅಧಿಕಾರದ ವ್ಯಾಪ್ತಿಯನ್ನು ಅವರು ಮೀರಿದ್ದಾರೆಯೇ ಎಂಬುದು ಒಂದು. ಈಗ ಹೈ ಪವರ್ ಕಮಿಟಿ 1-1-98ರಲ್ಲಿ ಮೀಟಿಂಗ್ ಮಾಡಿದೆ; ಅವರು ಮಾಡಿರತಕ್ಕದ್ದು ಕಾನೂನಿನೊಳಗೆ ಮಾಡಿದ್ದಾರೆಯೇ ಅಥವಾ ಹೊರಗಡೆ ಮಾಡಿದ್ದಾರೆಯೇ ಯಾವ ಕನ್ಸಿಡರೇಷನ್‌ಗೋಸ್ಕರ ಮಾಡಿದರು, ಇಷ್ಟೇ ಇರತಕ್ಕದ್ದು. ಸರ್ಕಾರ ಏನೂ ಅವರಿಗೆ

ಮಂಜೂರಾತಿ ಕೊಟ್ಟಿಲ್ಲ. ಆ ರೀತಿ ಮಾಡಬೇಕೆಂದಿದ್ದರೆ 1-1-98ರಲ್ಲಿ ಆಗಿರತಕ್ಕ ಮೀಟಿಂಗನ್ನು ಜನವರಿಯ 3-4ನೇ ತಾರೀಖೇ ಮಾಡಬಹುದಿತ್ತು. ಇವತ್ತು ನಾವು ಮಾರ್ಚ್ 11ರಲ್ಲಿದ್ದೇವೆ. ನೀವು ಅನಾವಶ್ಯಕವಾಗಿ ಯಾವ ಉದ್ದೇಶದಿಂದ ಇದನ್ನು ಮಾಡುತ್ತಿದ್ದೀರೆಂದು ಅರ್ಥವಾಗುತ್ತಿಲ್ಲ. ದಯಮಾಡಿ ತಾವು ಇದನ್ನು ಎಕ್ಸ್‌ಪ್ಲೈನ್ ಮಾಡಬೇಕು. ಈಗ ನಾನು ಈ ಸಭೆಗೆ ಇಷ್ಟು ಮಾತ್ರ ಹೇಳುತ್ತೇನೆ; ಇದರಲ್ಲಿ ಯಾರಾದರೂ ಅಧಿಕಾರಿಗಳು, ನನಗೆ ಬಂದಿರತಕ್ಕ ಮಾಹಿತಿ ಪ್ರಕಾರ ಅರಣ್ಯ ಇಲಾಖೆಯವರು, ಪ್ರಿನ್ಸಿಪಾಲ್ ಸೆಕ್ರೆಟರಿ (ಫಾರೆಸ್ಟ್) ಮತ್ತು ಇತರ ಅಧಿಕಾರಿಗಳು ಖಚಿತವಾಗಿ ಇದು ಆಗುವುದಿಲ್ಲವೆಂದು ಪ್ರೊಸೀಡಿಂಗ್ಸ್‌ನಲ್ಲಿ ಡ್ರಾ ಮಾಡಿರುವುದನ್ನು ತಮಗೆ ಹೇಳಿದ್ದೇನೆ.

ಅಧ್ಯಕ್ಷರು: ಸ್ವಲ್ಪ ತಾಳ್ಮೆ ಇಟ್ಟುಕೊಳ್ಳಿ. ಈ ಶ್ರೀ ಜಯಚಂದ್ರ ಅವರು ಓದಿದಂತೆ ರೂಲ್ 9ರ ಪ್ರಕಾರ, the Director of Mines and Gelogy, who is the Secratary of the Committee, ಸ್ಕ್ರೂಟಿಸೈಸ್ ಮಾಡಿ then only he should bring this subject before the Committee. ಸ್ಕ್ರೂಟಿನಿ ಮಟ್ಟದಲ್ಲೇ ಇದು ಹೊರಟು ಹೋಗಬೇಕು. ಅವರ ಅಲಿಗೇಷನ್ ಏನೆಂದರೆ, ಸ್ಕ್ರೂಟಿಸೈಸ್ ಮಾಡಿ ಎಂದರೆ, ತಪ್ಪು ತಪ್ಪು ಮಾಡಿ ಕಳುಹಿಸಿ ಕಮಿಟಿ ಮುಂದೆ ಕನ್ಸಿಡರೇಷನ್ ಮಾಡಿಕೊಳ್ಳುವುದಕ್ಕೆ ಇಟ್ಟುಕೊಳ್ಳುವರೆಂದು ಅವರು ಹೇಳುತ್ತಿರತಕ್ಕದ್ದು. ಜನರಲ್ ಆಗಿ ಶ್ರೀ ಪ್ರಕಾಶ್ ಅವರು ಆಗಲೇ ಹೇಳಿದರು; ನಮಗೆ ತರಬೇತಿ ಇರುವುದಿಲ್ಲ ಏನು ಓದಬೇಕು ಏನು ಬರೆಯಬೇಕು ಎಂದು; 25 ವರ್ಷ ವಯಸ್ಸಾಗಿರಬೇಕು, ಓಟರ್ಸ್ ಲಿಸ್ಟ್‌ನಲ್ಲಿ ಹೆಸರು ಇರಬೇಕು, ಹುಚ್ಚು ಹಿಡಿದಿರಬಾರದು, ಸರಿಯಾಗಿರಬೇಕು, ಅಂದಾಗ ನಾವು ಇಲ್ಲಿಗೆ ಬಂದುಬಿಡುತ್ತೇವೆ. ಅವರು ಹಾಗಲ್ಲ. ಅವರಿಗೆ ತರಬೇತಿ ಇರುತ್ತದೆ. ತರಬೇತಿ ಇರುವವರು ಸ್ಕ್ರೂಟಿನಿ ಮಾಡಿ ಇದನ್ನು ಕಳುಹಿಸುವಾಗ ಹೇಗೆ ಕಳುಹಿಸುತ್ತಾರೆಂದು ಅವರು ಕೇಳುವುದು ಅಲ್ಲವೇ?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು): ಮಾನ್ಯ ಸಚಿವರು ಕೊಟ್ಟಿರತಕ್ಕ ಉತ್ತರದಲ್ಲಿ ಸ್ಪಷ್ಟವಾಗಿದೆ. ವಿಧಾನಸಭೆಯಲ್ಲಿ ಪರಿಶೀಲನೆ ತಪ್ಪಾಗಿತ್ತು ಎಂದು ಇಟ್ಟುಕೊಳ್ಳಿ. ಇದು ಸರ್ಕಾರದ ಮಟ್ಟದಲ್ಲಿ ಬಂದಾಗ ಅದನ್ನು ಪರಿಶೀಲನೆ ಮಾಡಿ ಕಾನೂನು ಬಾಹಿರವಾಗಿರತಕ್ಕ ಪ್ರೊಸೀಡಿಂಗ್ಸ್ ಒಂದು ವೇಳೆ ಇದ್ದರೆ ಅದಕ್ಕೆ ಮಾನ್ಯತೆ ಕೊಡುವುದಿಲ್ಲ. ಅದಕ್ಕಾಗಿ ಎನ್‌ಕ್ವೈರಿ ಮಾಡಬೇಕಾಗಿತ್ತು.

ಅಧ್ಯಕ್ಷರು: ಜನರಲ್ ಆಗಿ ನಾವು, the politicians are known to pass erratic orders, not knowing the implications and consequences. They are supposed to correct us. Here is a peculiar situation, where they have resorted to all kinds

of erroneous methods and expecting us to set right. Probably that is the trend of the day.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಯಡಿಯೂರಪ್ಪನವರು ಮತ್ತು ಮಾನ್ಯ ಖರ್ಗೆಯವರು ಪ್ರಸ್ತಾಪ ಮಾಡಿದರು; ಯಾವುದೋ ಪ್ರಭಾವಕ್ಕೆ ಒಳಗಾಗಿ ಅಧಿಕಾರಿಗಳು ಈ ಕೆಲಸ ಮಾಡಿದ್ದಾರೆ ಎನ್ನುವಂತ ಮಾತನ್ನು ನಮ್ಮ ಮೇಲೆ ತಿರುಚತಕ್ಕದ್ದು ಇದು. ಅಥವಾ ಅಧಿಕಾರಿಗಳು ಎಲ್ಲರೂ ಕೂಡ ಯಾವುದೋ ಪೂರ್ವನಿರ್ಧಾರಿತ ಕಾರಣಗಳಿಗಾಗಿ ಮಾಡಿದ್ದಾರೆಂದು ಅಲ್ಲ. ಆದುದರಿಂದ ಅಲ್ಲಿರತಕ್ಕ ಅರಣ್ಯ ಇಲಾಖೆಯವರು ಕಳುಹಿಸಿರತಕ್ಕದ್ದು, ಪ್ರಿನ್ಸಿಪಾಲ್ ಸೆಕ್ರೆಟರಿ (ಫಾರೆಸ್ಟ್) ಅವರು ಮಾಡಿರತಕ್ಕ ಎಲ್ಲಾ ವ್ಯವಹಾರಗಳು ಇರುವುದರಿಂದ ನಾವು ಸಿ.ಬಿ.ಐ ಎನ್‌ಕ್ವೈರಿ ಮಾಡತಕ್ಕ ಅಗತ್ಯವಿಲ್ಲ.

ಅಧ್ಯಕ್ಷರು: ಶಿವಕುಮಾರ್ ಅವರೇ ನೀವು ಮೂರು ಜನ ಮಾತ್ರ ಏತಕ್ಕ ಧರಣಿ ಕುಳಿತಿದ್ದೀರಿ? Mr.Shivakumar listen to me. You reprersent a political party. ನಿಮ್ಮ ವಿರೋಧ ಪಕ್ಷದ ನಾಯಕರು ಇಲ್ಲೇ ಇದ್ದಾರೆ. Mr. Muddahanume Gowda, you are all responsible Members of a Political party. You take consolidated decision. ದಯಮಾಡಿ ನಿಮ್ಮ ನಿಮ್ಮ ಸ್ಥಳಗಳಿಗೆ ಹೋಗಿ, ಇದು ಚೆನ್ನಾಗಿ ಕಾಣುವುದಿಲ್ಲ. It does not looke nice. I am appealing to you. ತಾವು ಬಂದು ವೆಲ್‌ನಲ್ಲಿ ಇರುವುದು ಅಂದರೆ ಇನ್‌ಸ್ಟಾಲ್‌ಮೆಂಟ್‌ನಲ್ಲಿ ಮಾಡಿಸುತ್ತೀರೇನು?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ತಮ್ಮ ಗಮನಕ್ಕೆ ಮುಂಜಾನೆಯೇ ತರಬೇಕೆಂದಿದ್ದೆ. ಈ ಸಿವಿಲ್ ಸರ್ವೆಂಟ್ಸ್ ಮತ್ತು ಸರ್ಕಾರ ಇದರ ಜವಾಬ್ದಾರಿ ಯಾವ ರೀತಿ ಇರಬೇಕೆಂಬುದಕ್ಕೆ ಮಾನ್ಯ ಸಚಿವರೂ ಕೂಡ ಹೇಳುತ್ತಿದ್ದರು. ಆ ಅರ್ಥದಲ್ಲಿ ಆಗಿದೆ ನಿಮ್ಮದು. ಇದು ಕಾರ್ಯದರ್ಶಿ ಮಾಡಿದರೆ ನಿಮ್ಮ ಜವಾಬ್ದಾರಿ ಅಲ್ಲವೆಂದು ಅಲ್ಲ. ಎಲ್ಲಾ ಸರ್ಕಾರಿ ಆದೇಶಗಳು ಅಧೀನ ಕಾರ್ಯದರ್ಶಿ ಹೆಸರಿನಲ್ಲಿ ಹೊರಡುತ್ತವೆ.

ಅಧ್ಯಕ್ಷರು: ಸರ್ಕಾರಿ ಆಜ್ಞೆ ಆಗಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅದಕ್ಕೆ ಉದಾಹರಣೆ ಕೊಟ್ಟು ಹೇಳುತ್ತಿದ್ದೇನೆ. ಅದಕ್ಕೆ ಪ್ರೊಸೀಡಿಂಗ್ಸ್ ಆಗಬೇಕೆಂದರೆ ಇವೆಲ್ಲಾ ಎಕ್ಸಾಮಿನ್ ಮಾಡಿ ಮಾಡುತ್ತೀರಿ. ರೂಲ್ಸ್ ಪ್ರಕಾರ ನೋಡಿ ಕಮಿಟಿ ಮುಂದೆ ಇಡುತ್ತೀರೆಂದು ನಾವು ತಿಳಿದುಕೊಂಡಿದ್ದೆವು. ಇಲ್ಲಿಯವರೆಗೆ ಹೀಗೆ ನಡೆಯುತ್ತದೆಂದು ತಿಳಿದುಕೊಂಡಿದ್ದೆವು. ಈಗ ಗೊತ್ತಾಯಿತು, ನೀವು ಹೇಳಿದ ಮೇಲೆ. ಅವರು ಸುಮ್ಮನೆ ಹಾಗೇ ಕಳುಹಿಸುತ್ತಿರುತ್ತಾರೆ; ಎಲ್ಲವನ್ನೂ ನಿಮ್ಮ ಮಟ್ಟದಲ್ಲಿ ಎಕ್ಸಾಮಿನ್ ಮಾಡುತ್ತೀರೆಂದು ಈಗ ನಮಗೆ ಅರ್ಥವಾಯಿತು.

ಶ್ರೀ ಪಿ.ಜಿ.ಆರ್‌ಸಿಂಧ್ಯ: ನಿಮ್ಮ ಕಾಲದಲ್ಲಿ ಯಾರು ಅಧಿಕಾರಿಗಳು ಇದ್ದರು ಅವರೇ ನಮ್ಮ ಕಾಲದಲ್ಲಿಯೂ ಇದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸ್ವಲ್ಪ ಕೇಳಿ, ಇದನ್ನೇ ಹೇಳಿಕೊಂಡು ಹೋಗಿ. ನಾನು ಪ್ರಾರಂಭದಲ್ಲೇ ಮಾನ್ಯ ಪಟೇಲರಿಗೆ ಹೇಳಬೇಕೆಂದು ತಂದಿದ್ದೆ; ಆದರೆ ಹೇಳುವುದಕ್ಕೆ ಅವಕಾಶವಾಗಲಿಲ್ಲ. ಏಕೆಂದರೆ ಮಾನ್ಯ ಯಡಿಯೂರಪ್ಪನವರು ಸುಮ್ಮನೆ ಕೂಡಲಿಲ್ಲ. ಈಗ ಹೇಳುತ್ತೇನೆ ಕೇಳಿ:

"Civil Servants are permanent officers of Government and do not change or vacate office with the change in the Government. They continue to function whatever the party is in power. While Ministers are more interested, and right so, in issue of policy, the Civil Servants are concerned with the executions of that policy. Although the role of the Civil Servants in the framing of the policy is not less significant, the Civil Servants enjoy full freedom to express themselves frankly in giving advice to the Ministers. In fact, it is the duty of the Civil Servants to advice the Minister against the pitfalls of the particular policy, but once a final decision is taken by the Minister, the Civil Servant has to implement it loyally." ಅದು ಇನ್ನೂ ಈ ಹಂತಕ್ಕೆ ಬಂದಿಲ್ಲ. ಅಡ್ವೈಸ್ ಲೆವೆಲ್‌ನಲ್ಲಿ ಇದೆ, ಅದು ಪ್ರೋಸೆಸ್ ಆಗುತ್ತಿದೆ. "Even if the decision taken is contrary to the advice given by him, he has to implement it. That is a different thing. The Parliament.i.e. Assembly does not interfere with the executive in the day-to-day matters. But whatever the Civil Servants do or have done, will have to be justified before the Parliament after the action has or has not taken place. A great responsibility lies on the administration to give correct facts, because they will be tested. A Civil Servant should never lie to Parliament or Assembly, because that is the greatest offence one can commit. Parliament may excuse bad actions, but would not never accept a lie." ಅದಕ್ಕೆ ನಮಗೆ ಇಲ್ಲಿ ರೂಲ್ಸ್ ಗೊತ್ತಿಲ್ಲವೆಂದು

ಅವರು ಹೇಳುವ ಹಾಗೆ ಇಲ್ಲ. ಏಕೆಂದರೆ ಈ ರೂಲ್ಸ್ ತೋರಿಸುವವರು ನಾವು ಬುದ್ಧಿವಂತರು ಇಲ್ಲ, ಮಂತ್ರಿಗಳಿಗೆ ಗೊತ್ತಿಲ್ಲ, ಅವರು ಓದಿ ಬರೆಯುವವರು ಅಲ್ಲವೆಂದರೂ ಅವರಿಗೆ ಗೈಡ್ ಮಾಡತಕ್ಕ ಜವಾಬ್ದಾರಿ ಇವತ್ತು ಸಿವಿಲ್ ಸರ್ವೆಂಟ್ಸ್ ಮೇಲೆ ಇದೆ. ಇದು ಪಾರ್ಲಿಮೆಂಟರಿ ಡೆಮಾಕ್ರಸಿಯಲ್ಲಿ ಒಪ್ಪಿರತಕ್ಕ ತತ್ವ. ನಾವು ಎಲ್ಲರೂ ಕೂಡ ಇದೇ ಪದ್ಧತಿಯನ್ನು ಅನುಸರಿಸಿಕೊಂಡು ಬಂದಿದ್ದೇವೆ. ಅದಕ್ಕೆ ಮಂತ್ರಿಗಳ ಜವಾಬ್ದಾರಿಗಿಂತ ಹೆಚ್ಚಿನ ಜವಾಬ್ದಾರಿ ಅಧಿಕಾರಿಗಳದ್ದು ಇರುತ್ತದೆ; ಕಮಿಟಿಯದು ಇರುತ್ತದೆ; ಅದರಲ್ಲಿ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳು ಇದ್ದಾರೆ. ಇಂಡಸ್ಟ್ರೀಸ್ ಸೆಕ್ರೆಟರಿ ಇದ್ದಾರೆ, ಫೈನಾನ್ಸ್ ಸೆಕ್ರೆಟರಿ ಇದ್ದಾರೆ, ಇಂಡಸ್ಟ್ರೀಸ್ ಡೈರೆಕ್ಟರ್ ಇದ್ದಾರೆ.

4.40 ಪಿ.ಎಂ

ಯಾರೋ ಸಣ್ಣಪುಟ್ಟ ಡೆಪ್ಯುಟಿ ಸೆಕ್ರೆಟರಿ, ಸೆಕ್ಷನ್ ಆಫೀಸರ್ ಇದ್ದಾರೆಂದರೆ ಅಥವಾ ಅಸಿಸ್ಟೆಂಟ್ ಕಮೀಷನರ್, ಸೆಟ್ಲಮೆಂಟ್ ಆಫೀಸರ್ ಅದು ಬೇರೆ. ಆದರೆ, ಯಾವ ರೂಲಿನ ಕೆಳಗೆ ಇದನ್ನು ಮಾಡುವುದಕ್ಕೆ ಬರುವುದಿಲ್ಲ, ಅದನ್ನು ಅವರೇ ರೆಕಮೆಂಡ್ ಮಾಡಿದ್ದನ್ನು ನೀವು ಸಮರ್ಥಿಸಿಕೊಂಡರೆ ಅದು ಎಷ್ಟರಮಟ್ಟಿಗೆ ನ್ಯಾಯವೆನಿಸುತ್ತದೆ?

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾನು ಸಮರ್ಥಿಸಿಕೊಳ್ಳುತ್ತಿಲ್ಲ. ಯಾವುದು ಕಾನೂನಿನ ಪ್ರಕಾರ ಇದೆಯೋ, ಇಲ್ಲವೋ ಎನ್ನುವುದನ್ನು ನೋಡಬೇಕಾಗುತ್ತದೆ. ಎಲ್ಲ ಅಧಿಕಾರಿಗಳೂ ಮಾಡಿರುವುದು ತಪ್ಪೆಂದು ನಾನು ಹೇಳಲು ತಯಾರಿಲ್ಲ. ಯಾರಾದರೂ ಕಾನೂನು ವ್ಯಾಪ್ತಿಯನ್ನು ಮೀರಿದ್ದರೆ ಅಥವಾ ಯಾರಾದರೂ ಸಹ ಕಾನೂನು ಬಾಹಿರವಾಗಿ ಕೆಲಸ ಮಾಡಿದ್ದರೆ ಅವರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ: ಅಧ್ಯಕ್ಷರೆ, They have committed a mistake...

ಶ್ರೀ ಪಿ.ಜಿ.ಆರ್.ಸಿಂಧ್ಯ: ಕಾನೂನು ಬಾಹಿರವಾಗಿದ್ದರೆ ಯಾವುದೇ ಕಾರಣದಿಂದಲೂ ಯಾರಿಗಾದರೂ ಸಹ ಸರ್ಕಾರ ಕೊಡುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಈ ಕೇಸ್‌ನಲ್ಲಿ, ಇದನ್ನು ರದ್ದು ಮಾಡುತ್ತೇವೆ, ಕಾನೂನು ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿ, ಮುಂದಿನ ವಿಷಯಕ್ಕೆ ಹೋಗೋಣ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ: ಯಾವ ರೀತಿ ಸಮರ್ಥನೆ ಮಾಡಿಕೊಳ್ಳುತ್ತೀರಿ?

SRI P.G.R.SINDIA: Sir, I am appealing to the Hon'ble

Speaker ನಾನು ಯಾರನ್ನೂ ಡಿಪೆಂಡ್ ಮಾಡಿಕೊಳ್ಳುತ್ತಿಲ್ಲ. ಕಾನೂನು ವ್ಯಾಪ್ತಿ ಮೀರಿ ಯಾರಾದರೂ ಕೆಲಸ ಮಾಡಿದ್ದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಕಾನೂನು ಬಾಹಿರವಾಗಿದ್ದರೂ ಸಹ ಕ್ರಮ ತೆಗೆದುಕೊಳ್ಳುತ್ತೇವೆ. ಯಾವುದೇ ಕಾರಣದಿಂದಲೂ ಈ ಜಮೀನನ್ನು ನಾವು ಕಾನೂನು ಬಾಹಿರವಾಗಿ ಕೊಡುವುದಿಲ್ಲ, ಆ ಪ್ರಶ್ನೆಯೇ ಬರುವುದಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ): ಕಾನೂನು ವಿರುದ್ಧವಾಗಿ ಕೊಡುವುದಿಲ್ಲವೆಂದರೆ, ಅಷ್ಟು ಸುಲಭವಾಗಿ ಆಗಿಲ್ಲ. ಇದರಲ್ಲಿ ಬಹಳ ಸೂಕ್ಷ್ಮವಾದ ವಿಷಯ ಅಡಗಿದೆ. ಇವರು ಕಾನೂನಿನಲ್ಲಿ ರಿನ್ಯೂ ಮಾಡುವುದಕ್ಕೆ ಬರುತ್ತಿರಲಿಲ್ಲವೆಂದು ಹೇಳುತ್ತಾರೆ. ಅಂದಮೇಲೆ, ಶ್ರೀ ಶ್ರೀರಂಗರವರು ಹೈಕೋರ್ಟಿಗೆ ಹೋಗಿ ರಿನ್ಯೂ ಮಾಡಬೇಕೆಂದು ಅಪ್ಲಿಕೇಷನ್ ಕೊಟ್ಟಾಗ, ನಿಮ್ಮ ಲಾಯರ್ ಯಾರಿದ್ದರು? ಕನ್ಸಿಡರೇಷನ್ ಮಾಡುವುದಕ್ಕೆ, ರಿನ್ಯೂ ಮಾಡುವುದಕ್ಕೆ ಎಂದು ಹೇಳಿದ್ದೀರಿ, ನಿಮಗೆ ಅಧಿಕಾರ ಕೊಟ್ಟವರಾರು? ಗೌರ್ನಮೆಂಟ್ ಪ್ಲೀಡರ್ ಅಥವಾ ಅಡ್ವೋಕೇಟ್ ಜನರಲ್ ಅಪಿಯರ್ ಆಗಿದ್ದರೆ? ಕನ್ಸಿಡರೇಷನ್ ಮಾಡುವುದಕ್ಕೆ ಹೈಕೋರ್ಟ್ ಹೇಗೆ ಅನುಮತಿ ಕೊಟ್ಟಿತು? ನಿಮ್ಮವರು ಇನ್ಸ್‌ಸ್ಟ್ರಕ್ಷನ್ ಕೊಟ್ಟಿದ್ದರಿಂದ ಕನ್ಸಿಡರ್ ಎಂದು ಹೇಳುತ್ತಾರೆ. ಇದರಲ್ಲಿ ಏನಿದೆ ಎಂದರೆ, ಯಾರಾದರೂ ಕಾನೂನು ಬಾಹಿರವಾಗಿ ಮಾಡಬೇಕಾಗಿ ಬರುತ್ತೋ ಅಂಥದ್ದರಲ್ಲಿ ಕೋರ್ಟಿನ ರಕ್ಷಣೆ ತೆಗೆದುಕೊಳ್ಳುವುದಕ್ಕೋಸ್ಕರ ಒಂದು ರಿಟ್ ಹಾಕಿದ ಹಾಗೆ ಮಾಡುವುದು, ಕನ್ಸಿಡರೇಷನ್ ಎಂದು ಅಪ್ಲಿಕೇಷನ್‌ನಲ್ಲಿ ಆರ್ಡರ್ ತೆಗೆದುಕೊಳ್ಳುವುದು, ಆಮೇಲೆ ಅದನ್ನು ತೆಗೆದುಕೊಂಡು ಬಂದು ಕಮಿಟಿ ಮೀಟಿಂಗ್‌ನಲ್ಲಿಡುವುದು. ಇದು ಮೇಲ್ನೋಟಕ್ಕೆ ಸಾಬೀತಾಗಿದೆ. ಖಂಡಿತವಾಗಿ ಹೈಕೋರ್ಟಿನಲ್ಲಿ ಈ ರಿಟ್ ಬಂದಾಗ ರಿನ್ಯೂ ಮಾಡುವುದಕ್ಕೆ ಫಾರೆಸ್ಟ್ ಆಕ್ಟ್ ಪ್ರಕಾರ ಮತ್ತು ಈ ಆಕ್ಟ್ ಪ್ರಕಾರ ಪರ್ಮಿಷನ್ ಇಲ್ಲ; ಫಾರೆಸ್ಟ್ ಲ್ಯಾಂಡ್ ಎಂದು ಅವರು ತೋರಿಸಿದ್ದರೆ, ರಿಜೆಕ್ಟ್ ಆಗುತ್ತಿತ್ತು, ರಿಟ್ ಬರುತ್ತಲೇ ಇರಲಿಲ್ಲ. ಕನ್ಸಿಡರ್ ಮಾಡುವ ಅವಕಾಶವೇ ಇರುತ್ತಿರಲಿಲ್ಲ. ರಿಟ್ ಹಾಕಿದ ಹಾಗೆ ಮಾಡಿ, ಕನ್ಸಿಡರ್ ಮಾಡುತ್ತೇವೆಂದು ಒಪ್ಪಿಕೊಂಡು ಬಂದು ಇಲ್ಲಿ ದಿ: 15. 12. 97ಕ್ಕೆ ಫಾರೆಸ್ಟ್ ಲ್ಯಾಂಡ್‌ನ್ನು ತೆಗೆದುಕೊಂಡು ಡೀ-ನೋಟಿಫೈ ಎಂದು ಹೇಳಿ ದಿ: 31. 12. 97ಕ್ಕೆ ಎಸ್‌ಎಸ್‌ಐ ಸರ್ಟಿಫಿಕೇಟ್‌ನ್ನು ತೆಗೆದುಕೊಂಡು, ದಿ: 1. 1. 98ಕ್ಕೆ ಕಮಿಟಿ ಮೀಟಿಂಗ್‌ನಲ್ಲಿ ಇಟ್ಟಿರುತ್ತಾರೆ. ಇದರ ಹಿಂದೆ ಅಧಿಕಾರಿಗಳು ಮಾತ್ರ ಇರುತ್ತಾರೆಂದು ಹೇಳಿದರೆ ಖಂಡಿತವಾಗಿ ನಂಬುವುದಕ್ಕಾಗುವುದಿಲ್ಲ. ಈ ವಿಷಯ ಬಹು ಸೂಕ್ಷ್ಮವಾದುದು. ಖಂಡಿತವಾಗಿ ತಕ್ಷಣ, whoever might be the Officer, ಯಾರು ಇದಕ್ಕೆ ರೆಸ್ಪಾನ್ಸಿಬಲ್ ಆಗಿದ್ದಾರೋ ಅವರನ್ನು ತಕ್ಷಣ, divest their powers, take all those records, place it immediately before the Hon'ble Speaker and hand over to them House Committee, ಹೌಸ್ ಕಮಿಟಿಗೆ

ಕೊಟ್ಟು ಇದರ ಬಗ್ಗೆ ಸೂಕ್ತ ವಿಚಾರಣೆಯಾಗಬೇಕು. ಇಲ್ಲದಿದ್ದರೆ, ನಿಜವಾಗಿ ಇದರಲ್ಲಿ ನ್ಯಾಯ ದೊರಕುವುದಿಲ್ಲ. divest them with the powers, place all the records before the Hon'ble Speaker. ನಿಮಗೇನು ಅನುಮಾನ? ಇದರಲ್ಲಿ ಏನೂ ತಪ್ಪಿಲ್ಲದಿದ್ದರೆ ರೆಕಾರ್ಡ್‌ಗಳನ್ನು ಕೊಡಿ. ಯಾರ್‍ಯಾರು ತಪ್ಪಿತಸ್ಥರಾಗಿದ್ದಾರೋ, ಗೌರ್‍ನಮೆಂಟ್ ಪ್ಲೀಡರ್‌ಗೆ ಅಥವಾ ಗೌರ್‍ನಮೆಂಟಿಗೆ ಯಾರು ಇನ್‌ಸ್ಟ್ರಕ್ಷನ್ ಕೊಟ್ಟರು? what is your counter filed there? How you have justified the action ಹೇಳಬಹುದಾಗಿತ್ತಲ್ಲಾ. ಕನ್ಸಿಡರ್ ಮಾಡಿ ಎಂದು ಬರೆದಾಗ, ಸಿಂಗಲ್ ಜಡ್ಜ್ ಮಾಡಿದ್ದರೆ, ನೀವು ಅಪೀಲ್ ಹಾಕಬಹುದಾಗಿತ್ತು. ಕನ್ಸಿಡರೇಷನ್ ಮಾಡುವುದಕ್ಕೆ ಬರುವುದಿಲ್ಲ, ಆಕ್ಟ್‌ನಲ್ಲಿ ರಿನ್ಯೂ ಮಾಡುವುದಕ್ಕೆ ಅಧಿಕಾರವಿಲ್ಲ, ಕಾನೂನು ಬಾಹಿರವಾಗಿ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಬಹುದಾಗಿತ್ತು. ಆ ಕೆಲಸವನ್ನೂ ನೀವು ಮಾಡಿಲ್ಲ. ಆದ್ದರಿಂದ, my appeal to the Hon'ble Speaker, kindly instruct them to take action against the official whoever responsible, divest all powers, take out of them of all powers, ಈ ಪವರನ್ನು ಅವರ ಮೇಲೆ ಇಡಿ. ಒಂದು ಕ್ಷಣ ಇಟ್ಟರೂ ಕೂಡ, ಈ ಪೇಪರ್‌ಟ್ಯಾಂಪರ್ ಆಗುವ ಪರಿಸ್ಥಿತಿ ಇದೆ. ಈ ರೆಕಾರ್ಡ್‌ಗಳನ್ನು ಸ್ಪೀಕರ್‌ರವರಿಗೆ ದಯವಿಟ್ಟು ಹಾಜರು ಮಾಡಿ. ಸದನ ಸಮಿತಿ ಮಾಡಲಿ, ಸೂಕ್ತ ಎನ್‌ಕ್ವೈರಿ ಆಗಲಿ. ಇಲ್ಲದಿದ್ದರೆ ನನಗನ್ನಿಸುತ್ತೆ, ಜೆಮ್ ಗ್ರಾನೈಟ್ ವಿಷಯ ಏನಾಯಿತೆಂದು ತಮಗೆಲ್ಲಾ ಗೊತ್ತಿದೆ. ನಾವೆಲ್ಲಾ ಹೇಳಿದ್ದೆವು, ಆಗಲಿಲ್ಲ. ನಾವು ಮಾಡಬೇಕಾದ ಕೆಲಸವನ್ನು ನಾವು ಮಾಡದಿದ್ದರಿಂದ ಶ್ರೀ ಶ್ರೀರಾಮರೆಡ್ಡಿಯವರು ಹೈಕೋರ್ಟಿಗೆ ಹೋಗಿ ಸಿಬಿಐ ಎನ್‌ಕ್ವೈರಿ ಆಗಲಿ ಎಂದು ಕೇಳಬೇಕಾಗಿ ಬಂತು. ಸಿ.ಬಿ.ಐ ಎನ್‌ಕ್ವೈರಿ ಅಲ್ಲಿ ಆಗುವ ಪರಿಸ್ಥಿತಿ ಬಂದಿದೆ. ನಾವು ಮಾಡಬೇಕಾದ ಕೆಲಸವನ್ನು, ಎಕ್ಸಿಕ್ಯುಟಿವ್, ಲೆಜಿಸ್ಲೇಚರ್ ಫೈಲ್ಯೂರ್ ಆದಾಗ, ಕೋರ್ಟಿಗೆ ಹೋಗಬೇಕಾದ ಪರಿಸ್ಥಿತಿ ಬರುತ್ತದೆ. ಅದಕ್ಕೆ ಅವಕಾಶ ಮಾಡಿಕೊಡಬೇಡಿ. Please give all those papers to the Hon'ble Speaker, let us examine. ನಾವೇನಾದರೂ ತಪ್ಪು ಮಾಡಿದ್ದರೆ ಸದನ ಸಮಿತಿ ಮಾಡಿ. ಅದರಲ್ಲಿ ತೀರ್ಮಾನ ತೆಗೆದುಕೊಳ್ಳೋಣ. ನೀವು ಮಾಡಿದ್ದೀರೋ, ಅಧಿಕಾರಿಗಳು ಮಾಡಿದ್ದಾರೋ, ಇದರ ಹಿಂದೆ ಕಾಣದ ಕೈ ಇದೆಯೋ, ಇಲ್ಲವೋ, ರಾಜಕಾರಣಿಗಳು ಇದ್ದಾರೋ, ಇಲ್ಲವೋ ನೋಡೋಣ. Why should we shirk our responsibility; ಏನೂ ತಪ್ಪು ಮಾಡದಿದ್ದರೆ, why are you shielding those officers. ಪೇಪರ್ಸ್ ಕೊಡುವುದಕ್ಕೆ ಅನುಮಾನವೇನು? ಎಲ್ಲವನ್ನೂ ಕೂಡ ಇಟ್ಟಿದ್ದಾರೆ. ಕಮಿಟಿ ತೀರ್ಮಾನ ಕೊಟ್ಟಿದೆ. ಯಾವ ರಿಪೋರ್ಟ್ ಇದೆ ಎನ್ನುವುದನ್ನು ಶ್ರೀ ಶಿವಕುಮಾರ್, ಶ್ರೀ ಖರ್ಗೆಯವರು, ಶ್ರೀ ಟಿ.ಬಿ.ಜಯಚಂದ್ರರವರು, ಶ್ರೀ ಯಡಿಯೂರಪ್ಪನವರು ಇಲ್ಲಿ ಇಟ್ಟಿದ್ದಾರೆ. ನಿಮಗೇನು ಅನುಮಾನ ದಯವಿಟ್ಟು

ಪೇಪರ್ ಇಡಿ. ಪೇಪರ್ಸ್ ಇಡುವುದಕ್ಕೆ ನಿಮಗೆ ಅನುಮಾನ ಇದ್ದರೆ, ಸ್ಪೀಕರ್‌ರವರಿಗೆ, please hand over all the papers forthwith, divest their powers. Let them be at home for sometime, let us see what happens. Please ask them to place them before the Hon'ble Speaker and divest them of the powers. ನಮಗೆ ಹೇಳುವುದಲ್ಲ. ಯಾರು ಸತ್ಯ, ಯಾರಿಲ್ಲ ಎನ್ನುವುದನ್ನು ನೋಡೋಣ. ಅಧ್ಯಕ್ಷರಿಗೆ ನಾನು ಕಳಕಳಿಯಿಂದ ಭಿನ್ನವಿಸಿಕೊಳ್ಳುತ್ತೇನೆ, direct them to hand over all the papers to the Hon'ble Speaker, ಸದನ ಸಮಿತಿ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಒಂದು ದಿವಸ ಅವಕಾಶ ಕೊಟ್ಟರೆ ಟ್ಯಾಂಪರ್ ಆಗುವ ಪರಿಸ್ಥಿತಿ ಇದೆ. I think there can be no objection by the Hon'ble Minister.

ಡಾ|| ಎಂ.ಪಿ.ಕರ್ಕಿ: ಸರ್ಕಾರ ಪರಿಶೀಲನೆಯಲ್ಲಿದೆ ಎಂದು ಹೇಳಿದೆ. ಪರಿಶೀಲನೆ ವಿವಿಧ ಹಂತಗಳಲ್ಲಾಗುತ್ತದೆ. ಯಾವ ಹಂತದಲ್ಲಿದೆ ಎಂದು ನಾವು ನೋಡೋಣ? whether the Chief Minister has signed or Chief Minister recommended. ಪೇಪರ್ ಇಡಲಿ. ಅದಕ್ಕೆ ದಯವಿಟ್ಟು ಸರ್ಕಾರಕ್ಕೆ ಪೇಪರ್ ಇಡಲು ಆದೇಶ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಈ ಒಂದು ಚಿಂತನೆಯನ್ನು ನೋಡಿದಾಗ, ಮೇಲ್ನೋಟಕ್ಕೆ ಅಧಿಕಾರಿಗಳು ತಪ್ಪು ಮಾಡಿದ್ದಾರೆನ್ನತಕ್ಕದ್ದು ಎದ್ದು ಕಾಣುತ್ತಿದೆ. ಆದರೆ, ತಪ್ಪು ಮಾಡಿರುವಾಗ, ಅವರು ಯಾರೇ ಉನ್ನತ ಅಧಿಕಾರಿಗಳಾಗಲೀ ಶಿಕ್ಷೆ ಮಾಡಬೇಕಾದುದು ಸರ್ಕಾರದ ಕರ್ತವ್ಯ. ಅಧಿಕಾರಿಗಳು ತಪ್ಪು ಮಾಡಿದ್ದಾರೆನ್ನುವ ಬಗ್ಗೆ ಬೇರೆ ಸಂಶಯವಿಲ್ಲ. ಹಿಂದೆ ಇದೇ ಸದನದಲ್ಲಿ ಭೂ ವಿಜ್ಞಾನ ಮತ್ತು ಗಣಿ ಇಲಾಖೆ ನಿರ್ದೇಶಕರಾಗಿದ್ದ ಶ್ರೀ ಮದನ್‌ಗೋಪಾಲ್‌ರವರು ನನ್ನ ಒಪ್ಪಿಗೆ ಇಲ್ಲದೆ, ಮಂತ್ರಿಗಳ ಆದೇಶವಾಗಲೀ, ಅಧಿಕಾರಿಗಳ ಆದೇಶವಾಗಲೀ ಪಡೆಯಬಾರದೆಂದು ಹೇಳಿದ್ದು, ದೊಡ್ಡ ಚರ್ಚೆಯಾಗಿ, ಶ್ರೀ ನಾಗೇಗೌಡರ ಅಧ್ಯಕ್ಷತೆಯಲ್ಲಿ ಒಂದು ಸದನ ಸಮಿತಿ ನಡೆಯಿತು. ಕೊನೆಗೆ, ಆ ಸದನ ಸಮಿತಿ ಮುಂದೆ ಹೋಗಿ, ಶ್ರೀ ನಾಗೇಗೌಡರು ರಾಜೀನಾಮೆ ಕೊಟ್ಟರು, ನಾನು ಸಭೆಗೆ ಬರುವುದಕ್ಕಾಗಲಿಲ್ಲ. ಶ್ರೀ ಮದನ್‌ಗೋಪಾಲ್ ಡೆಲ್ಲಿಗೆ ಹೋಗಬೇಕಾಯಿತು. ಅನೇಕ ಕಾರಣಗಳಿಂದ ಅದು ಎಷ್ಟು ಮಹತ್ವ ಪಡೆಯಬೇಕಾಗಿತ್ತೋ ಆ ಮಹತ್ವಕ್ಕೆ ಅನೇಕ ಅಡ್ಡಗಾಲುಗಳು ಬಂದು ಅದು ಮುರಿದು ಬಿತ್ತು. ಈ ಸದನದಲ್ಲಿ ಅನೇಕಬಾರಿ ನಾನು ಹೇಳಿದ್ದೇನೆ, ಮೂಲಭೂತವಾಗಿ ಗ್ರಾನೈಟ್ ತೆಗೆಯುವುದನ್ನೇ ನಿಲ್ಲಿಸಬೇಕು. ಸಂಪೂರ್ಣವಾಗಿ ನಿಲ್ಲಿಸಿದರೆ, ಯಾರಿಗೆ ಕೊಡಬೇಕು, ಯಾರಿಗೆ ಬಿಡಬೇಕೆಂಬ ಪ್ರಶ್ನೆಗಿಂತ ಹೆಚ್ಚಾಗಿ ರಾಜ್ಯದಲ್ಲಿ ನಿಸರ್ಗ ಸಂಪತ್ತು ಉಳಿಯುತ್ತದೆ, ಇದನ್ನು ಮಾಡುವ ವ್ಯವಸ್ಥೆಯನ್ನು

ಪ್ರಾಮಾಣಿಕವಾಗಿ ನಾವು ವಿರೋಧಪಕ್ಷದವರು ಮತ್ತು ಆಡಳಿತ ಪಕ್ಷದವರು ಒಟ್ಟಿಗೆ ಸೇರಿ ಇವತ್ತು ಮಾಡಬೇಕಾಗಿದೆ. ಒಂದು ಇಂಚು ಕಲ್ಲನ್ನೂ ನಾವು ಇಡೀ ರಾಜ್ಯದಲ್ಲಿ ಯಾರೂ ತೆಗೆದುಕೊಳ್ಳುವುದಿಲ್ಲ ಎನ್ನುವ ಪ್ರಾಮಾಣಿಕ ಪ್ರದರ್ಶನ ನಡೆಯಲೆಂಬುದು ನಾನು ಮೊದಲಿನಿಂದಲೂ ಮಾಡುತ್ತಿರುವ ಒತ್ತಾಯ. ಹಿಂದೆ ಸುಪ್ರೀಂಕೋರ್ಟಿನಲ್ಲಿ ಭಗವತಿಯವರು ನ್ಯಾಯಾಧೀಶರಾಗಿದ್ದಾಗ, ಒಂದು ಇಂಚು ಕಲ್ಲನ್ನೂ ತೆಗೆಯಬಾರದು, ಇದು ದೇಶದ ಸ್ವತ್ತು, ಮಾನವ ಕುಲವಿರುವವರೆಗೂ ಇರಬೇಕೆಂದು ಹೇಳಿದ್ದರು. ಅದು ಅನೇಕ ಬಾರಿ ಬಂದಿದೆ. ರಾಜ್ಯದಲ್ಲಿರುವ ಈ ಕಲ್ಲಿನ ಡಿಪಾಸಿಟ್ ಎಷ್ಟಿರಬಹುದೆಂದರೆ, ಇನ್ನು ಹತ್ತು ವರ್ಷಗಳು ತೆಗೆದರೆ ಮುಗಿದುಹೋಗುತ್ತದೆ. 10 ವರ್ಷಗಳಲ್ಲಿ ಇಡೀ ಕರ್ನಾಟಕದ ಎಲ್ಲ ಕಲ್ಲನ್ನೂ ತೆಗೆಯಬಹುದು. ಆಮೇಲೆ, ಈ ಕಲ್ಲು ತೆಗೆಯುವುದಕ್ಕೆ ಯಾರೂ ಬೇಕಿಲ್ಲ. ಪ್ರಾಮಾಣಿಕವಾಗಿ ಈ ಕಲ್ಲನ್ನು ತೆಗೆಯುವ ವ್ಯವಸ್ಥೆಯನ್ನೇ ನಿಲ್ಲಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಲೆಂಬುದು ನನ್ನ ಸಲಹೆ.

MR. SPEAKER: Mr. Prakash, what is your solution to this, I have to get out of this crisis.

ಶ್ರೀ ಎಂ.ಪಿ.ಪ್ರಕಾಶ್: ನಾನು ಅತ್ಯಂತ ವಿನಯದಿಂದ ನಮ್ಮ ವಿರೋಧ ಪಕ್ಷದ ನಾಯಕರಿಗೆ, ಸದಸ್ಯರಿಗೆ ಕೇಳಿಕೊಳ್ಳುವುದೇನೆಂದರೆ, ಅನೇಕ ಸಂದರ್ಭಗಳಲ್ಲಿ ಸರ್ಕಾರ ನಿರ್ಧಾರ ತೆಗೆದುಕೊಳ್ಳುವುದಕ್ಕಿಂತ ಪೂರ್ವದಲ್ಲಿ, ಈ ರೀತಿಯಾಗಿ ಅಧಿಕಾರಿಗಳಿಂದ ಶಿಫಾರಸ್ಸು ಆಗಿ ಬಂದಿರತಕ್ಕ ಅಥವಾ ಇಲಾಖೆಗಳಿಂದ ಶಿಫಾರಸ್ಸು ಆಗಿ ಬಂದಿರುವುದು ಅದೇ ಅಂತಿಮ ಆಜ್ಞೆ ಅಲ್ಲ. ಪ್ರಾಯಶಃ, ನಮ್ಮನ್ನು ಗೊಂದಲದಲ್ಲಿ ಸಿಕ್ಕಿಸಿ, ಅಥವಾ ನಾವು ಅಪ್ರಾಮಾಣಿಕವಾಗಿ ಹಾಗೆ, ಹೀಗೆ ಎನ್ನುವ ಬೇರೆ ಉದ್ದೇಶಕ್ಕಿಂತ ಈ ನಿರ್ಧಾರ ತೆಗೆದುಕೊಳ್ಳುತ್ತೇವೆನ್ನುವ ಹಾಗಿದ್ದರೆ ನಾವು ತಪ್ಪು ಮಾಡುವವರೆಗೆ ಅವರು ಕಾಯಬಹುದಾಗಿತ್ತು. ಮಾನ್ಯ ಸಚಿವರು ಹೇಳಿದಂತೆ, ಈಗಾಗಲೇ 1ನೇ ತಿಂಗಳಲ್ಲಿ ಬಂದಿರುವ ಪ್ರಸ್ತಾವನೆಗೂ ಚುನಾವಣೆಗಳು ಮುಗಿದ ನಂತರವೂ ಕೂಡ ಸರ್ಕಾರ ಯಾವುದೇ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ. ಅಂತಿಮವಾದ ನಿರ್ಧಾರವನ್ನು ತೆಗೆದುಕೊಂಡಿಲ್ಲದ ಸಂದರ್ಭದಲ್ಲಿ ನೀವು ಅಪ್ರಾಮಾಣಿಕತೆಯಿಂದ ಮತ್ತು ಬೇಕಾಬಿಟ್ಟಿಯಾಗಿ ಕ್ರಮ ತೆಗೆದುಕೊಳ್ಳುತ್ತೀರೆಂದು ಹೇಳಿ ಅವರು ಊಹಿಸಬೇಕಾದ ಅವಶ್ಯಕತೆ ಏನಿದೆ? ಎರಡನೆಯದಾಗಿ, ಸರ್ಕಾರ ಇಂತಹ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದ ಸಂದರ್ಭಗಳಲ್ಲಿ ಅದು ಕಾನೂನು ಬಾಹಿರವಾಗಿ ಇದೆಯೇ, ಇಲ್ಲವೇ? ಅದು ಕಾನೂನಿನ ಚೌಕಟ್ಟಿನಲ್ಲಿ ಬರುತ್ತದೆಯೇ, ಇಲ್ಲವೇ? ಎಂಬುವ ವಿಚಾರಗಳನ್ನು ಪರಿಶೀಲಿಸುತ್ತದೆ. ಮಾನ್ಯ ಸದಸ್ಯರು ಹೇಳಿದಂತೆ, ಪರಿಶೀಲನೆ ಮಾಡುತ್ತೇವೆಂದಾಕ್ಷಣ, ಅದನ್ನು ಮಂಜೂರು ಮಾಡುತ್ತೇವೆಂದಲ್ಲ. ಸರ್ಕಾರ ನಡೆಸಿದಂತಹ ಹಿರಿಯರಾದ ಶ್ರೀ ಖರ್ಗೆಯವರೂ ಇಲ್ಲಿದ್ದಾರೆ. ಅನೇಕ ಪ್ರಸ್ತಾವನೆಗಳು ಬರುತ್ತವೆ. ಆದರೆ, ಅಂತಿಮವಾಗಿ, ಪ್ರಾಮಾಣಿಕವಾಗಿ, ಕಾಯ್ದೆಗನುಗುಣವಾದ

ರೀತಿಯಲ್ಲಿ ಸರ್ಕಾರ ನಿರ್ಧಾರ ತೆಗೆದುಕೊಂಡಿದೆಯೋ, ಇಲ್ಲವೋ ಎಂಬುದನ್ನು ಮೊದಲು ವಿವೇಚನೆ ಮಾಡಬೇಕಾಗುತ್ತದೆ. ಆ ನಿರ್ಧಾರ ತೆಗೆದುಕೊಳ್ಳದೇ ಇರುವುದರಿಂದ ನಾವು ಸರ್ಕಾರ ಯಾವ ತಪ್ಪನ್ನೂ ಮಾಡಿಲ್ಲ. ತಪ್ಪನ್ನು ಮಾಡದೇ ಇರುವ ಸಂದರ್ಭದಲ್ಲಿ ಅದನ್ನು ಸದನ ಸಮಿತಿ ಪರೀಕ್ಷಿಸುವುದಗಲೀ ಅಥವಾ ಸಿ.ಒ.ಡಿ. ಎನ್‌ಕ್ವೈರಿ ಆಗತಕ್ಕದ್ದಾಗಲೀ, ಸಿ.ಬಿ.ಐ. ಎನ್‌ಕ್ವೈರಿ ಮಾಡುವುದಾಗಲೀ ಉದ್ಭವವಾಗುವುದಿಲ್ಲ. ಆ ಕಾರಣಕ್ಕಾಗಿ ದಯವಿಟ್ಟು ನಾವು ತಪ್ಪನ್ನು ಮಾಡುತ್ತೇವೆಂದು ಏತಕ್ಕೆ ಪ್ರಿಸ್ಯೂಮ್ ಮಾಡುತ್ತೀರಿ?

ಅಧ್ಯಕ್ಷರು: ತಾವು ಸ್ವಲ್ಪ ತಡವಾಗಿ ಬಂದಿರಿ. You kindly confer with your colleagues. Prima facie Officers have erred. I am convinced. Unfortunately, I canot allow my conscience to be stangled by strings of any pressure. I wanted to be very alive and kicking. I am in a very disturbed state. I am convinced prima facie that officers have erred at a stretch, leave alone the Opposition. I am not transferring the allegations to the Government. I am not taking it that far. But I am convinced because ರೂಲ್ 9ರಲ್ಲಿ ಏನು ಹೇಳುತ್ತದೆ ಅದನ್ನು ವಯಲೇಟ್ ಮಾಡಿದ್ದಾರೆ. ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರ್ ಏನು ಮಾಡಿದ್ದಾರೆ he has crossed his limits; ಮತ್ತು 1-1-98ಕ್ಕೆ ಮೀಟಿಂಗ್‌ನಲ್ಲಿ ಏನು ಇಟ್ಟುಕೊಳ್ಳುತ್ತಾರೆ; they had no jurisdiction even to deliberate and there are people with sufficient experience; they are all people who have qualified in Civil Service Examination, ಏನೋ ಎಸ್‌ಡಿಸಿ ಎಲ್‌ಡಿಸಿ-ಗಳು ಆದರೆ ಪರ್ವಾಗಿಲ್ಲ. ಎಲ್ಲಾದರೂ ಉಂಟಾ?

SRI M.P.PRAKASH: That aspect of it also, the Government is willing to examine it and see prima facie if there is, I do appreciate Sir because you say that prima facie there are certain errors have happened but that doesn't mean that the Government is not looking into that aspect of it. We will certainly look into that aspect.

ಶ್ರೀ ಎಂ.ಮಲ್ಲಿಕಾರ್ಜುನಾ ಖರ್ಗೆ: ಪ್ರಕಾಶ್ ಅವರೇ, ತಾವಿರಲಿಲ್ಲ. 1-1-98ರ ಪ್ರೊಸೀಡಿಂಗ್ಸ್ ಓದಿ ತೋರಿಸಿದ್ದೇವೆ. ಅದರಲ್ಲಿ ಅವರೇ ಹೇಳುತ್ತಾರೆ ಯಾರಿಗೆ

ಎಲಿಜಿಬಿಲಿಟಿ ಇದೆ, ಯಾರಿಗೆ ಇಲ್ಲ ಎಂದು. ಅದಾದಮೇಲೆ ಒಂದೊಂದು ಮೀಟಿಂಗ್‌ನಲ್ಲಿ ಒಂದೊಂದು ರೆಕಮೆಂಡ್ ಮಾಡುತ್ತಾರೆ. ಅದೆಲ್ಲಾ ಕೂಡ ಬಂತು. ಇದು ಫಾರೆಸ್ಟ್ ಲ್ಯಾಂಡ್ ಆಗಿರುವುದರಿಂದ ಇದನ್ನು ಲೀಸ್ ಕೊಡುವುದಕ್ಕೆ ಬರುವುದಿಲ್ಲ ಎಂದು ರೂಲೇ ಇದೆ. ಇದೊಂದೇ ಕೇಸ್‌ನಲ್ಲಿ ಕೊಡುವುದಿಲ್ಲವಲ್ಲಾ ಅವರು. ಇಂಥ ಹತ್ತಾರು ಕೇಸ್‌ಗಳು ಬಂದಿರುತ್ತವೆ. ಹತ್ತಾರು ವರ್ಷಗಳಿಂದ ಇದನ್ನು ಎಗ್ಸಾಮಿನ್ ಮಾಡಿಕೊಂಡೇ ಇದ್ದಾರೆ. ಪರ್ಟಿಕ್ಯೂಲರ್ ಕೇಸ್‌ನಲ್ಲಿ ಹೇಗೆ ರೆಕಮೆಂಡ್ ಮಾಡಿದರು ಪ್ರೊಸೀಡಿಂಗ್ಸ್‌ನಲ್ಲಿ? ಪ್ರೊಸೀಡಿಂಗ್ಸ್‌ನಲ್ಲಿ ಬಂದಮೇಲೆ ಅದರ ಆಧಾರದಮೇಲೆ ಕಮಿಟಿಯಲ್ಲಿ ಇದನ್ನು ಎಗ್ಸಾಮಿನ್ ಮಾಡಿದ್ದಾರೆ. ಅದಕ್ಕಾಗಿ ಕೊಡಬೇಕೆಂದು ಪುನಃ ಡಿಪಾರ್ಟ್‌ಮೆಂಟಿನಿಂದ ಹೋಗಿದೆ. ಮುಖ್ಯಮಂತ್ರಿಗಳು ಅದರ ಇನ್‌ಛಾರ್ಜ್ ಇದ್ದಾರೆ ಎಂದು ಹೇಳಿದರು. ನಾನು ತಿಳಿದುಕೊಂಡಿದ್ದೆ ಅಡಿಷನಲ್ ಅಲೋಕೇಷನ್ ಆಯಿತಲ್ಲಾ ಆಗ ಎಲ್ಲಾದರೂ ಕೊಟ್ಟಿದ್ದಾರೇನೋ ಅಂದುಕೊಂಡಿದ್ದೆ. ಪೋರ್ಟ್‌ಫೋಲಿಯೋ ಅವರ ಹತ್ತಿರವೇ ಇದೆಯಂತೆ. ನ್ಯಾಚುರಲ್ಲಾಗಿ ಪ್ರೋಸೆಸ್ ಆಗಿ ಅವರ ಹತ್ತಿರವೇ ಹೋಗುತ್ತದೆ. ಹೋದಮೇಲೆ ಈ ಕಾಲಿಂಗ್ ಅಟೆನ್‌ಷನ್ ನೋಟೀಸ್ ಬಂದಮೇಲೆ ಸ್ವಲ್ಪ ಹೆಚ್ಚುಕಡಿಮೆ ಆಗಿ ಮತ್ತೆ ಅದು ಅಲ್ಲಿಗೇ ನಿಂತಿದೆ. ಸ್ವಲ್ಪ ಕೇಳಿ ಹೇಳುತ್ತೇನೆ. ಇದು ರಿಯಾಲಿಟಿ. ನಾನು ಹೇಳುವುದಿಷ್ಟೆ. ಯಾರಿಗೆ ಗೊತ್ತಿಲ್ಲ ಅವರು ತಪ್ಪು ಮಾಡಿದ್ದಾರೆ ಅಂದರೆ ಒಪ್ಪಿಕೊಳ್ಳೋಣ. ಆದರೆ ಎಲ್ಲಾ ಸೆಕ್ರೆಟರಿಗಳಿಗೆ ಹೇಗೆ ಕೊಡಬೇಕು ಕೊಡಬಾರದು ಎಂಬುದು ಗೊತ್ತಿದ್ದರೂ ಕೂಡ ಅವರು ರೆಕಮೆಂಡ್ ಮಾಡಬೇಕು ಅಂದರೆ, ಮತ್ತೆ ಇನ್ನೂ ಅವರಿಗೆ ನಾವು ಡಿಫೆಂಡ್ ಮಾಡಿಕೊಂಡೇ ಹೋಗುತ್ತೇವೆ ಅಂದರೆ ಇಲ್ಲೇ ಬಂದಿದ್ದು ಸಂಶಯ. ಕೊಡುವುದಕ್ಕೆ ಬರುವುದಿಲ್ಲ ಎಂದು ರೂಲ್ಸ್‌ನಲ್ಲಿದ್ದರೂ ಕೂಡ ಕೊಡಬಹುದು ಎಂದು ಅವರು ರೆಕಮೆಂಡ್ ಮಾಡಿದರೆ ಇವರು ಅದನ್ನು ಪ್ರೊಸೆಸ್ ಮಾಡುವುದಕ್ಕೆ ಚಾನಲ್ ಕೊಟ್ಟಿದ್ದಾರೆ ಅಂದರೆ ಇಬ್ಬರಿಗೂ ಬೇಕಾದಂಥ ವಸ್ತು ಅನ್ನತಕ್ಕಂಥ ಮಾತಿನಲ್ಲೇ ಆ ಫೈಲನ್ನು ಇವತ್ತು ತಂದಿಡಿ. ಅದರಲ್ಲಿ ಯಾರು ಏನು ಹೇಳಿದ್ದಾರೆ, ಯಾರ ಇನ್‌ಸ್ಟ್ರಕ್ಷನ್ ಏನಿದೆ ಗೊತ್ತಾಗಲಿ. ಅದಕ್ಕಾಗಿ ಸದನ ಸಮಿತಿಯಾದರೂ ಮಾಡಿ. ಸಿ.ಬಿ.ಐ. ಎನ್‌ಕ್ವೈರಿ ಬೇಡ ಅಂದರೆ ಬಿಡಿ. ಸದನದ ಒಂದು ಸಮಿತಿ ಮಾಡಿ. ಸ್ಪೀಕರ್ ಹತ್ತಿರ ಫೈಲ್ ತರಿಸಿ. ನೀವು ನೋಡಿ. ಅದರಲ್ಲಿ ಇಲ್ಲ ಅಂದರೆ ಬಿಟ್ಟುಬಿಡಿ. ಇದೆ ಎಂದರೆ ಬೇಕಾದರೆ ಕ್ರಮ ತೆಗೆದುಕೊಳ್ಳಿ. ನಮಗೂ ಕರೆಸಿ. ನೀವೂ ಬನ್ನಿ. ಇಲ್ಲೆಲ್ಲಾ ವಿರೋಧಪಕ್ಷದ ಫ್ಲೋರ್ ಲೀಡರ್ಸ್‌ನ್ನು ಕರೆಸಿ. ಕಾನೂನು ಪ್ರಕಾರ ಏನೇನು ಇದೆಯೋ, ಫೈಲಿನಲ್ಲಿ ಏನು ಬರೆದಿದ್ದಾರೆ ಅದನ್ನು ತರಿಸಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಅಧ್ಯಕ್ಷರೇ....

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಸಿಂಧ್ಯಾ ಅವರೇ ಒಂದು ನಿಮಿಷ. ಈಗ ಇದೆಲ್ಲಾ ತಾವು ಕೇಳಿದ್ದೀರಿ.

ಅಧ್ಯಕ್ಷರು: ಪದ್ಧತಿ ಏನೆಂದರೆ, ಅಧ್ಯಕ್ಷರಿಗೆ ಯಾವುದೇ ಇಂಥ ಸನ್ನಿವೇಶದಲ್ಲಿ ಕಾಗದಪತ್ರಗಳನ್ನು ಒಪ್ಪಿಸುವಾಗ ಉದ್ದೇಶ ಏನು ಅಂದರೆ ಯಾರು ಆಪಾದನೆ ಮಾಡಿರುತ್ತಾರೆ ಸದನದ ಸದಸ್ಯರು ಅವರಿಗೆ ಆ ಕಡತಗಳನ್ನು ಪರೀಕ್ಷೆ ಮಾಡುವುದಕ್ಕೆ ಅವಕಾಶ ಇರಬೇಕು ಎನ್ನತಕ್ಕಂಥದ್ದು. Not that Speaker looks into the paper. The Speaker has no interest. The Members of the Opposition should have access to that.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಕಾಗದಪತ್ರಗಳನ್ನು ನಿಮಗೆ ತೋರಿಸುವುದಕ್ಕೆ ನಾವು ತಯಾರಿದ್ದೇವೆ. ಅಲ್ಲಿ ಆಗಿರತಕ್ಕ ಪ್ರೊಸೀಡಿಂಗ್ಸ್, ರೆಕಮೆಂಡೇಷನ್, ಯಾರು ಯಾರು 28 ಜನ ಅಪ್ಲಿಕೆಂಟ್ಸ್, ಶ್ರೀರಂಗ ಕಂಪನಿ ಪಾರ್ಟ್‌ನರ್ಸ್ ಯಾರು ಎಲ್ಲಾ ಡೀಟೈಲ್ಸ್‌ನ್ನೂ ನಿಮಗೆ ಕೊಡುವುದಕ್ಕೆ ತಯಾರಿದ್ದೇವೆ. ಕರೆದು ಅವರಿಗೂ ತೋರಿಸಬಹುದು. ನಮ್ಮದೇನೂ ತಕರಾರಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಸಾರ್, ಪೂರ್ತಿ ಎಲ್ಲಾ ದಾಖಲೆಗಳನ್ನೂ ಇವತ್ತೇ ತಮಗೆ ಕಳುಹಿಸಿಕೊಡುವ ವ್ಯವಸ್ಥೆ ಮಾಡಲಿ.

ಶ್ರೀಮತಿ ಪ್ರಮೀಳ ನೇಸರ್ಗಿ: ಇವತ್ತೇ ಇಡಬೇಕು. ಇವತ್ತೇ ತರಿಸಬೇಕು.

ಅಧ್ಯಕ್ಷರು: ರಾಮಸ್ವಾಮಿಯವರು ಏನೋ ಹೇಳಬೇಕೆಂದಿದ್ದಾರೆ. ಯಡಿಯೂರಪ್ಪನವರೆ ಒಂದು ನಿಮಿಷ ಇರಿ. ರಾಮಸ್ವಾಮಿಯವರೇ ಹೇಳಿ.

ಶ್ರೀ ಎ.ಟಿ.ರಾಮಸ್ವಾಮಿ: ಸನ್ಮಾನ್ಯ ಅಧ್ಯಕ್ಷರೇ, ಶ್ರೀರಂಗ ಇಂಡಸ್ಟ್ರೀಸ್‌ನವರಿಗೆ ಕಲ್ಲುಗಣಿ ಗುತ್ತಿಗೆಗೆ ಸರ್ಕಾರದ ಆದೇಶ ಆಗಿಲ್ಲ, ಅದನ್ನು ಒಪ್ಪಿಕೊಳ್ಳೋಣ. ಅದರ ಹಿಂದಿನ ಉದ್ದೇಶ ಏನಿದೆಯೋ ಅದನ್ನು ಹೆಚ್ಚು ಚರ್ಚೆ ಮಾಡುವುದಕ್ಕೆ ಹೋಗುವುದು ಬೇಡ. ಈಗ ಸರ್ಕಾರದ ವತಿಯಿಂದ ಒಂದು ಹೈ ಲೆವೆಲ್ ಕಮಿಟಿ ಮಾಡಿದೆ. ಏತಕ್ಕೋಸ್ಕರ? ಕೊಡಬೇಕೇ ಕೊಡಬಾರದೇ ಎಂಬುದನ್ನು ಪರಿಪೂರ್ಣವಾಗಿ ಪರಿಶೀಲನೆ ಮಾಡತಕ್ಕ ಜವಾಬ್ದಾರಿಕೆ ಯಾರದು? ಅವರು ಸರಿಯಾಗಿ ಪರಿಶೀಲನೆ ಮಾಡದೆ ರೆಕಮೆಂಡ್ ಮಾಡಿದ್ದಾರೆ ಅಂದರೆ ಅಲ್ಲಿ ಲೋಪದೋಷ ಆಗಿದೆ ಎಂಬುದು ನನ್ನ ಅಭಿಪ್ರಾಯ. ಒಂದು, ಸೆಕ್ರೆಟರಿಯವರು ಸರಿಯಾಗಿಲ್ಲದ ಪ್ರಸ್ತಾವನೆಯನ್ನು ಹೇಗಿಟ್ಟರು? ಅಂಥ ಪ್ರಸ್ತಾವನೆಯನ್ನು ಹೈ ಲೆವೆಲ್ ಕಮಿಟಿಯವರು ಹೇಗೆ ರೆಕಮೆಂಡ್ ಮಾಡಿದರು? ರೆಕಮೆಂಡ್ ಆಗಿ ಬಂದಿದೆ, ಅದು ಅಂತಿಮ ಆದೇಶ ಆಗಿಲ್ಲ ಎಂದು ನಮ್ಮ ಪ್ರಕಾಶ್‌ಜಿ ಹೇಳುತ್ತಿದ್ದರು. ಆದೇಶ ಆಗದೇ ಇರಬಹುದು. ಆದರೆ ಹೈಲೆವೆಲ್ ಕಮಿಟಿಯವರಿಗೆ ಜವಾಬ್ದಾರಿಕೆ ಇತ್ತಲ್ಲ, ಅವರು ಏಕೆ ರೆಕಮೆಂಡ್ ಮಾಡಿದರು? ಅದಕ್ಕಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಒತ್ತಾಯ ಮಾಡುತ್ತಿರುವುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸದನ ಸಮಿತಿ ಮಾಡಿ ಎಗ್ಸಾಮಿನ್ ಮಾಡಲಿಕ್ಕೆ ಕೊಡುವ ಹಾಗಿದ್ದರೆ ಕೊಡಿ, ಅಥವಾ ಇವತ್ತು ಇಮ್ಮಿಡಿಯೇಟಾಗಿ ಫೈಲ್ ತರಿಸಲಿ. ತಮ್ಮೆದುರು ಬೇಕಾದರೆ ಎಲ್ಲಾ ಫ್ಲೋರ್ ಲೀಡರ್ಸ್ ಎಲ್ಲರನ್ನೂ ಕರೆಸಿ ತೋರಿಸಲಿ. ಅವರೂ ಇರಲಿ.

ಶ್ರೀ ಪಿ.ಜಿ.ಆರ್.ಸಿಂಧ್ಯ: ನೋಡಲಿ. ನಮ್ಮದೇನೂ ತಕರಾರಿಲ್ಲ. ನಮ್ಮದೇನೂ ಅಬ್ಜೆಕ್ಷನ್ ಇಲ್ಲ. ಸಂಬಂಧಪಟ್ಟ ಎಲ್ಲಾ ಕಡತಗಳನ್ನೂ ತರಿಸಬೇಕಾಗುತ್ತದೆ. ಈಗ 5 ಗಂಟೆ. ನಮ್ಮದೇನೂ ತಕರಾರಿಲ್ಲ, ನೋಡಬಹುದು. ನಾವು ಕೊಡುತ್ತೇವೆ. ಈಗಲೇ ಆಗಬೇಕು, ಈ ಕ್ಷಣದಲ್ಲೇ ಆಗಬೇಕು ಅಂದರೆ ಕಷ್ಟ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: 48 ತಾಸಾಯಿತು ನಾವು ನೋಟೀಸ್ ಕೊಟ್ಟು. ಆ ಫೈಲ್ ಸ್ಟಡಿ ಮಾಡುವುದಕ್ಕಾದರೂ ನಿಮ್ಮ ಹತ್ತಿರ ಇರಬೇಕಲ್ಲ. ನೀವು ತಯಾರು ಮಾಡಿಕೊಂಡೇ ಬಂದಿದ್ದೀರಿ. ಅದನ್ನು ಪ್ಲೇಸ್ ಮಾಡಿ. ಈಗಲೇ ಬೇಕಾದರೆ ತಮ್ಮ ಛೇಂಬರ್‌ನಲ್ಲಿ ನೋಡೋಣ. ಏನೂ ಇಲ್ಲ ಎಂದು ಅಂದರೆ ಕ್ಲೋಸ್ ಮಾಡೋಣ.

ಶ್ರೀ ಕೆ.ಎನ್.ನಾಗೇಗೌಡ: ಸರ್ಕಾರ ತಾತ್ವಿಕವಾಗಿ ಇರತಕ್ಕಂಥ ದಾಖಲಾತಿಗಳನ್ನು ನಿಮ್ಮ ಕೈಗೆ ಒಪ್ಪಿಸುತ್ತೇವೆ, ಇಬ್ಬರನ್ನೂ ಕರೆದು ಮುಖ್ಯಮಂತ್ರಿಗಳನ್ನು ಇಟ್ಟುಕೊಂಡು ನೋಡಬಹುದು ಎಂದು ಸದನದಲ್ಲಿ ಒಂದು ಭರವಸೆ ಕೊಟ್ಟಮೇಲೆ ಈ ಕ್ಷಣದಲ್ಲೇ ತರಿಸಬೇಕು, ಈಗಲೇ ತರಿಸಬೇಕು, ಸದನವನ್ನು ಮುಂದೂಡಿ ಎಂದರೆ ನಿಜವಾಗಿಯೂ ಸದನಕ್ಕೆ ಗೌರವ ಬರುವುದಿಲ್ಲ ಸಾರ್. ಅದರಿಂದ ನಮ್ಮ ಸಿಸ್ಟಂಗೂ ಗೌರವ ಬರುವುದಿಲ್ಲ. ತಾತ್ವಿಕವಾಗಿ ಒಪ್ಪಿಕೊಂಡಿದ್ದೇವೆ. ಎಲ್ಲಾ ನಿಮ್ಮ ಕೈಗ ಕೊಡುತ್ತೇವೆ. ಮುಖ್ಯಮಂತ್ರಿಗಳು ಇರುತ್ತಾರೆ. ಕರೆಸಿ ಎಲ್ಲಾ ತೋರಿಸಬಹುದು, ತಾಪತ್ರಯ ಇಲ್ಲ. ನಾಳೆಯಾದರೂ ಆಗಬಹುದು, ನಾಡಿದ್ದಾದರೂ ಆಗಬಹುದು. ಈ ಕ್ಷಣದಲ್ಲೇ ತರಿಸಿ, ಸದನವನ್ನು ಮುಂದೂಡಿ ಎಂದು ಹೇಳತಕ್ಕದ್ದು ಸರಿಯಾದುದಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೇ, ಏನಾದರೂ ಒಂದು ನಿರ್ಣಯ ತೆಗೆದುಕೊಳ್ಳಿ, ನಾಳೆ ಚರ್ಚೆ ಕಂಟಿನ್ಯೂ ಮಾಡಿ ಅದರಲ್ಲೇನೂ ಇಲ್ಲ.

ಅಧ್ಯಕ್ಷರು: ನಾಳೆ ನೋಡೋಣ. ಅದನ್ನು ಕಳುಹಿಸಿಕೊಡುತ್ತಾರೆ. ಮಾನ್ಯ ನೀರಾವರಿ ಮಂತ್ರಿಗಳು ಹೇಳಿದಂತೆ ಈಗಲೇ, ಈ ಕ್ಷಣದಲ್ಲೇ ಎಂದು ಮಾಡುವುದು ಬೇಡ. gentlemenly agreement ಅವರು ಹೇಳಿದಂತೆ ಸರ್ಕಾರ ತಾತ್ವಿಕವಾಗಿ ಒಪ್ಪಿಕೊಂಡಿದ್ದಾರೆ ಪೇಪರ್ಸ್ ಕೊಡುವುದಕ್ಕೆ. ಆದ್ದರಿಂದ ಮತ್ತೆ ಈ ಚರ್ಚೆ ಮುಂದುವರೆಸುವುದು ಬೇಕಾಗಿಲ್ಲ. ಈಗ ಒಂದು ಕೆಲಸ ಮಾಡಬಹುದು. ಈಗ ಅಡ್ಜರ್ನ್ ಮಾಡಿ ನಾವು ಮತ್ತೆ ನಾಳೆ ಸೇರಬಹುದು. ನಾಳೆ ಬೆಳಗ್ಗೆ 10 ಗಂಟೆಗೆ ನೀವು ಕೊಟ್ಟರೆ, ಮುಖ್ಯ ಮಂತ್ರಿಗಳೂ ಬಂದುಬಿಟ್ಟರೆ ನಮ್ಮ ಛೇಂಬರ್‌ನಲ್ಲಿ ಕುಳಿತು

ನೋಡಬಹುದು. ನಾನು ಎಲ್ಲಾ ಫ್ಲೋರ್ ಲೀಡರ್‌ಗಳನ್ನೂ ಕರೆಯುತ್ತೇನೆ. 11 ಗಂಟೆಯ ಹೊತ್ತಿಗೆ ನಾವು ಮುಗಿಸಿಕೊಂಡು ನಮ್ಮ ರೆಗ್ಯುಲರ್ ಬಿಸಿನೆಸ್‌ಗೆ ಬರಬಹುದು. ನಾಳೆ 10 ಗಂಟೆಗೆ ಮೀಟ್ ಮಾಡುವುದಕ್ಕಾಗುತ್ತದೆಯೇ?

ಶ್ರೀ ಎಂ.ಪಿ.ಪ್ರಕಾಶ್: ಆಫೀಸ್‌ಗಳು 10 ಗಂಟೆಗೆ ಪ್ರಾರಂಭವಾಗುತ್ತವೆ. 12 ಗಂಟೆಯ ಹೊತ್ತಿಗೆ ತಮಗೆ ಕೊಡುತ್ತೇವೆ.

ಅಧ್ಯಕ್ಷರು: ವಿರೋಧಪಕ್ಷದ ನಾಯಕರೇ ಯಡಿಯೂರಪ್ಪನವರೇ, ನಾಳೆ ಪ್ರಶ್ನೋತ್ತರ ವೇಳೆ ಆದಮೇಲೆ ಡೆಪ್ಯುಟಿ ಸ್ಪೀಕರ್ ಅವರು ಛೇರ್‌ನಲ್ಲಿ ಕುಳಿತಿರುತ್ತಾರೆ. ತಾವೆಲ್ಲಾ ನಮ್ಮ ಆಫೀಸಿಗೆ ಬರಬಹುದು. ನಾಳೆ ಎಲ್ಲಾ ಕಾಗದಪತ್ರಗಳನ್ನೂ ನೋಡಬಹುದು. ಆಗಬಹುದಲ್ಲವೆ? ಎಲ್ಲಾ ಫ್ಲೋರ್ ಲೀಡರ್ಸ್ ದಯಮಾಡಿ ನಾಳೆ ಪ್ರಶ್ನೋತ್ತರ ವೇಳೆ ಆದನಂತರ ನನ್ನ ಛೇಂಬರ್‌ಗೆ ಬರಬೇಕು ಎಂದು ಇಲ್ಲೇ ತಿಳಿಸಿಬಿಡುತ್ತಿದ್ದೇನೆ. ಈಗ ಸಭೆಯನ್ನು ಮುಂದೂಡಲಾಗಿದೆ. ಪುನಃ ನಾಳೆ ಬೆಳಗ್ಗೆ 11-00 ಗಂಟೆಗೆ ನಾವು ಸೇರೋಣ.

(ಸದನವು ಸಂಜೆ 5-00 ಗಂಟೆಗೆ ಮುಂದೂಡಲ್ಪಟ್ಟು ಪುನಃ ದಿನಾಂಕ 12-3-98ರಂದು ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)